# ತಪೋವಾಣಿ

ಸಂ. 11 ಸಂ. 8 ಆಗಸ್ಟ್ 2014 ರೂ.25


**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಸತ್ಯಯುಗ ಆರಂಭವಾಗಿದೆ. ನಾವೀಗ ಸಂಧಿಕಾಲದಲ್ಲಿದ್ದೇವೆ. ಬಹಳ ಜನರಿಗೆ ಇದರ ಅರಿವುಂಟಾಗಿದೆ. ಸತ್ಯಯುಗದ ಆಂದೋಲನವನ್ನು ಕೇವಲ ಅದರ ಪ್ರಚಾರಕ್ಕಾಗಿ ಮಾತ್ರವಲ್ಲದೆ, ಸತ್ಯಯುಗಕ್ಕೆ ಪ್ರವೇಶ ಮಾಡಲು ಜನರ ಪ್ರಜ್ಞೆಯನ್ನು ಜಾಗೃತಗೊಳಿಸುವುದರ ಮೂಲಕ ಅವರನ್ನು ಒಂದುಗೂಡಿಸಿ, ಅದರಿಂದ ಉಂಟಾಗುವ ಸಾಮೂಹಿಕ ಅಲೆಯಿಂದ ಈಗ ಕೊನೆಗೊಳ್ಳುತ್ತಿರುವ ಕಲಿಯುಗದ ಎಲ್ಲ ಕುರುಹುಗಳನ್ನು ನಾಮಾವಶೇಷ ಮಾಡುವುದಕ್ಕಾಗಿ ಆರಂಭಿಸಲಾಗಿದೆ. ಹಲವಾರು ದೇಶಗಳಲ್ಲಿ ಹಲವಾರು ಸಮೂಹಗಳು ಭೂಮಿಯನ್ನು ರಕ್ಷಿಸುವುದರಲ್ಲಿ, ಶಾಂತಿಯನ್ನು ಹರಡುವುದರಲ್ಲಿ ಮತ್ತು ಈ ಆಂದೋಲನವನ್ನು ಬೆಳೆಸುವುದರಲ್ಲಿ ನಿರತವಾಗಿವೆ. ಅವರ ಕೆಲಸವು ಮೌನವಾಗಿ ನಡೆಯುತ್ತಿದೆ. ಆದರೆ ಇದು ಭೂಮಿಯ ಮೇಲಿನ ಬಹು ಮುಖ್ಯ ಕಾರ್ಯ, ಏಕೆಂದರೆ ಇದೊಂದೇ ಜೀವರಾಶಿಯನ್ನುಳಿಸಿ ಬೆಳಕನ್ನು ತರಲು ಸಾಧ್ಯ.

ಉನ್ನತ ಲೋಕಗಳ ಹಲವಾರು ಮಹಾತ್ಮರು ಕೂಡ ಸತ್ಯಯುಗಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಹಲವಾರು ಜನರ ಸಂಪರ್ಕದಲ್ಲಿದ್ದುಕೊಂಡು ಅವರಿಗೆ ಯುಕ್ತ ಮಾಹಿತಿಗಳನ್ನು ನೀಡುತ್ತಿದ್ದಾರೆ. ಅಗೋಚರ ಮಹಾತ್ಮರು ಕೊಡುವ ಸಂದೇಶಗಳನ್ನು ಮುದ್ರಿಸಿ ಪ್ರಚುರಪಡಿಸುವುದು ಈಗ ಸರ್ವೇಸಾಮಾನ್ಯವಾಗಿದೆ. ನಮ್ಮ ಸಮುದಾಯವನ್ನು ಉನ್ನತ ಲೋಕದಲ್ಲಿರುವ ಸಪ್ತಋಷಿಗಳು ಮಾರ್ಗದರ್ಶಿಸುತ್ತಿದ್ದಾರೆ.

ನಾವು ಒಬ್ಬರನ್ನೊಬ್ಬರು ಅರಿತುಕೊಂಡು, ಸಂಪರ್ಕವನ್ನು ಸಶಕ್ತಗೊಳಿಸಿ, ಈ ಆಂದೋಲನವನ್ನು ನಮ್ಮ ಸುತ್ತಮುತ್ತಲಿನ ಜನರಿಗೆ ಹರಡುವುದೇ ನಮ್ಮ ಮುಂದಿನ ಹೆಜ್ಜೆ. ವಾರ್ತಾಪತ್ರಗಳನ್ನು ವಿನಿಮಯ ಮಾಡಿಕೊಳ್ಳುವುದು ಈ ಕೆಲಸದ ಬಹು ಮುಖ್ಯ ಭಾಗ. ಆದರೆ ಇದೇಕೋ ಆಗುತ್ತಿಲ್ಲ. ಹಲವಾರು ಸಮುದಾಯಗಳು ಸ್ಪಂದಿಸುವುದೇ ಇಲ್ಲ. ನಾವು ನಮ್ಮ ಸರಹದ್ದುಗಳನ್ನು ಮೀರಿ ಹೋಗಬೇಕು ಏಕೆಂದರೆ ಇದು ಪ್ರತ್ಯೇಕವಾಗಿದ್ದುಕೊಂಡು ಮಾಡುವ ಕೆಲಸವಲ್ಲ. ನಾವೆಲ್ಲರೂ ಒಂದು ನಿರ್ದಿಷ್ಟ ಸಮಯದಲ್ಲಿ ಪ್ರಾರ್ಥನೆ ಅಥವಾ ಧ್ಯಾನವನ್ನು ಮಾಡುವಂತಹ ಸರ್ವಸಮ್ಮತದ ಯೋಜನೆಯನ್ನು ನಿರೂಪಿಸಿಕೊಳ್ಳಬೇಕು. ಜೀವನವನ್ನು ನಡೆಸಲು ಹಾಗೂ ಇತರರೊಡನೆ ವ್ಯವಹರಿಸಲು, ಧರ್ಮದ ತಂಟೆಗೆ ಹೋಗದಿರುವಂತಹ ಸರ್ವಸಮ್ಮತ ಸೂತ್ರವೊಂದನ್ನು ನಾವು ಅಳವಡಿಸಿಕೊಳ್ಳಬೇಕು. ಪ್ರಪಂಚದ ಪ್ರಜ್ಞೆಯಂತೆ ಕಾರ್ಯನಿರ್ವಹಿಸಲು ವಿಶ್ವಸಂಸ್ಥೆಯಂತಹ ಸಂಸ್ಥೆಯೊಂದನ್ನು ಹುಟ್ಟುಹಾಕಬೇಕು.

ಸತ್ಯಯುಗದ ಆಂದೋಲನವು ಒಂದು ಆಧ್ಯಾತ್ಮಿಕ ಆಂದೋಲನ. ನಮ್ಮನ್ನೆಲ್ಲ ಒಗ್ಗೂಡಿಸಿ ಮುನ್ನಡೆಸಲು ಅಧ್ಯಾತ್ಮವೊಂದರಿಂದ ಮಾತ್ರ ಸಾಧ್ಯ. ■


ಮಾನಸ ಫೌಂಡೇಶನ್ (ರಿ)

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.

✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 4)

ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಮಾನಸದಲ್ಲಿ ಧ್ಯಾನಿಗಳು ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡುವುದರ ಮೂಲಕ ಗುರುಪೂರ್ಣಿಮೆಯನ್ನು ಆಚರಿಸಿದರು.

### ಸುದ್ದಿ-ಸೂಚನೆ

- 12-7-2014 ರಂದು ಸುಮಾರು 200 ಜನ ಸಾಧಕರು ಮೆಡಿಟೇಶನ್ ಹಾಲ್‌ನಲ್ಲಿ ಸೇರಿ ಗುರುಪೂರ್ಣಿಮೆಯನ್ನು ಆಚರಿಸಿದರು. ಪರಬ್ರಹ್ಮನ ಚೈತನ್ಯಗಳನ್ನು ಪಡೆದು, ಅದನ್ನು ಇಡೀ ಪ್ರಪಂಚಕ್ಕೆ ಹರಡುವ ಮೂಲಕ ಆ ದಿನವನ್ನು ಅವರು ನಿಶ್ಯಬ್ದವಾಗಿ ಆಚರಿಸಿದರು.
- 31-8-2014 ರಂದು ತಪೋನಗರದಲ್ಲಿ ಅಮರರವರ ಮಹಾಸಮಾಧಿ ಕಾರ್ಯಕ್ರಮ ವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮ ದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 28-8-2014 ರೊಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

### ಆನೇಕಲ್ ಕಾರ್ಯಕ್ರಮ

25-8-2014 ರಂದು ಸಂಜೆ 6 ಘಂಟೆಗೆ ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

**ಶ್ರೀ ಕೃಷ್ಣಜನ್ಮಾಷ್ಟಮಿ ವಿಶೇಷ ಧ್ಯಾನದ ತಂತ್ರ:** ಒಂದು ದೊಡ್ಡ ನೀಲಿಬಣ್ಣದ ಗೋಳವನ್ನು ಅಥವಾ ಭಗವಾನ್ ಶ್ರೀಕೃಷ್ಣನ ಆಕಾರವನ್ನು, ಯಾವುದಾದರೊಂದನ್ನು ಊಹಿಸಿಕೊಳ್ಳಿ. ನೀವು ಒಂದು ಬೆಳಕಿನ ಕಿರಣವಾಗಿ ಈ ಗೋಳವನ್ನು ಅಥವಾ ಆಕಾರವನ್ನು ಪ್ರವೇಶಿಸಿ. ಈಗ ನೀವು ಶ್ರೀಕೃಷ್ಣನೊಳಗೆ ಇದ್ದೀರಿ. ಅವನನ್ನು ಅನುಭವಿಸಿ. ಈ ತಂತ್ರವನ್ನು ಒಂದು ದಿನದಲ್ಲಿ ಎಷ್ಟು ಸಮಯದವರೆಗೆ ಬೇಕಾದರೂ, ಎಷ್ಟು ಬಾರಿಯಾದರೂ ಅಭ್ಯಾಸ ಮಾಡಬಹುದು.ಈ ತಂತ್ರವನ್ನು ಹತ್ತುದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ಅಭ್ಯಾಸ ಮಾಡಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಸೋಮ | ಶುಕ್ಲ ಅಷ್ಟಮಿ |
| 06 | ಬುಧ | ಶುಕ್ಲ ದಶಮಿ |
| 08 | ಶುಕ್ರ | ಮಹಾಲಕ್ಷ್ಮಿ ಪೂಜೆ |
| 10 | ಭಾನು | ಪೂರ್ಣಿಮಾ |
| 17 | ಭಾನು | ಶ್ರೀಕೃಷ್ಣ ಜನ್ಮಾಷ್ಟಮಿ |
| 18 | ಸೋಮ | ಕೃಷ್ಣ ಅಷ್ಟಮಿ |
| 23 | ಶನಿ | ಮಾಸ ಶಿವರಾತ್ರಿ |
| 25 | ಸೋಮ | ಅಮಾವಾಸ್ಯೆ, ಅಮರರವರ ಮಹಾಸಮಾಧಿ ದಿನ |
| 28 | ಗುರು | ಗೌರಿ ಪೂಜೆ |
| 29 | ಶುಕ್ರ | ಗಣೇಶ ಪೂಜೆ |
| 31 | ಭಾನು | ಅಮರರವರ ಮಹಾಸಮಾಧಿ ಕಾರ್ಯಕ್ರಮ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12 |
| ಲೈಟ್ ಚಾನಲಿಂಗ್: | ಮಧ್ಯಾಹ್ನ 12-1 |
| 17-08-2014 | ಶ್ರೀಕೃಷ್ಣ ಜನ್ಮಾಷ್ಟಮಿ |
| ವಿಶೇಷ ಧ್ಯಾನ: | ಬೆಳಿಗ್ಗೆ 11-1 |
| 31-08-2014 | ಅಮರರವರ ಮಹಾಸಮಾಧಿ ಕಾರ್ಯಕ್ರಮ |

### ಅಮರರವರ ಮಹಾಸಮಾಧಿ ಕಾರ್ಯಕ್ರಮ ಭಾನುವಾರ, 31-8-2014

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ ಭಾಷಣ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಲೈಟ್ ಚಾನಲಿಂಗ್ ಅನುಭವಗಳು

ನನ್ನ ಹತ್ತಿರದ ಸಂಬಂಧಿಯೊಬ್ಬನು ನವೆಂಬರ್ 2013 ಕ್ಕೆ ಮೊದಲು ತನ್ನ ವಿದ್ಯಾಭ್ಯಾಸದಲ್ಲಿ ಬಹಳ ಕಷ್ಟಪಡುತ್ತಿದ್ದನು. ಅವನು ತನ್ನ 9ನೇ ತರಗತಿಯಲ್ಲಿ 48% ಅಂಕವನ್ನು ಪಡೆದಿದ್ದ. ಅವನು ಅತ್ಯಂತ ಅಹಂಭಾವದವನಾಗಿದ್ದು, ಅದಾಗಲೇ ಮನೆಪಾಠದ ಇಬ್ಬರು ಅಧ್ಯಾಪಕರು ಅವನ ಬಗ್ಗೆ ಆಸೆ ಕಳೆದುಕೊಂಡಿದ್ದರು. ನಂತರ ನವೆಂಬರ್ 2013ರಲ್ಲಿ ನಾನು ಅವನಿಗೆ ಲೈಟ್ ಚಾನಲಿಂಗ್, ಸಪ್ತರ್ಷಿ ಪ್ರಾಣಾಯಾಮ, ಶಂಬಲದ ಮೊದಲನೇ ನಿಯಮ ಮತ್ತು ಜ್ಞಾಪಕಶಕ್ತಿಯನ್ನು ಹೆಚ್ಚಿಸುವ ತಂತ್ರವನ್ನು ಹೇಳಿಕೊಟ್ಟೆ. ಅವನು ಅವನ್ನು ಅತ್ಯಂತ ಶ್ರದ್ಧೆಯಿಂದ ಅಭ್ಯಾಸ ಮಾಡಿದ. ಅವನ ಅವ್ಯವಸ್ಥಿತ ನಡವಳಿಕೆ ಉತ್ತಮಗೊಂಡಿತು. ಅವನು ಶಾಂತನಾದ, ಅವನ ಅರ್ಥೈಸುವ ಶಕ್ತಿ ಹೆಚ್ಚಿತು. ಈ ಹಿಂದೆ ಅವನು ಆಕ್ರಮಣಕಾರಿ ಮತ್ತು ದುರಹಂಕಾರಿ ವ್ಯಕ್ತಿಯಾಗಿದ್ದ, ಈ ನಿಟ್ಟಿನಲ್ಲಿ ಈಗ ಸುಧಾರಣೆಯಾಗಿದೆ. ಅವನಿಗೆ ಬೆಳಕಿನ ಅನುಭವವಾಗುತ್ತಿದೆ ಹಾಗೂ ಆಧ್ಯಾತ್ಮಿಕ ಮತ್ತು ಲೌಕಿಕ ಮಟ್ಟಗಳೆರಡರಲ್ಲೂ ಅದ್ಭುತ ಅನುಭವಗಳಾಗಿವೆ. ಹಾಗೂ ಆತ ತನ್ನ 10ನೇ ತರಗತಿಯಲ್ಲಿ 84% ಅಂಕವನ್ನು ಪಡೆದನು!

ಅವನ ಗಣಿತದ ಪರೀಕ್ಷೆಯ ಸಮಯದಲ್ಲಿ ಒಂದು ಪ್ರಶ್ನೆಗೆ ಉತ್ತರವು ಆತನಿಗೆ ಮರೆತು ಹೋಯಿತು. ಅವನು ಬೆಳಕನ್ನು ಪ್ರಾರ್ಥಿಸಿದನು, ಮತ್ತಾಗ ಆ ಪ್ರಶ್ನೆಯ ಉತ್ತರವು ನೆರಳಿನ ರೂಪದಲ್ಲಿ ಅವನ ಉತ್ತರ ಪತ್ರಿಕೆಯ ಮೇಲೆ ಅವನಿಗೆ ಕಾಣಿಸಿತು.

ಒಮ್ಮೆ ಜೋರಾಗಿ ಮಳೆ ಸುರಿಯುತ್ತಿತ್ತು ಮತ್ತು ಬಿರುಗಾಳಿಯು ಅಲ್ಲೋಲಕಲ್ಲೋಲವನ್ನು ಉಂಟುಮಾಡಿತ್ತು. ಅವನ ಮನೆಯಲ್ಲೊಂದು ಮಾವಿನಮರವಿತ್ತು ಮತ್ತು ಅದರಲ್ಲಿನ ಮಾವಿನಕಾಯಿಗಳು ಬಿದ್ದುಹೋಗಬಾರದೆಂದು ಅವನು ಬಯಸಿದ್ದ. ಅದಕ್ಕಾಗಿ ಅವನು ಬೆಳಕನ್ನು ಪ್ರಾರ್ಥಿಸಿದ. ಎಲ್ಲೆಡೆ ನೂರಾರು ಮರಗಳು ಮತ್ತು ವಿದ್ಯುತ್ ಕಂಬಗಳು ಉರುಳಿದವು, ನೀರಿನ ಟ್ಯಾಂಕುಗಳು ಬಿದ್ದುಹೋದವು, ಅನೇಕ ಮನೆಗಳ ಛಾವಣಿಗಳು ಹಾರಿದವು ಆದರೆ ಆ ಮರದ ಒಂದೇ ಒಂದು ಕಾಯಿಯೂ ಬೀಳಲಿಲ್ಲ!

–ನಿಖಿಲ್ ಗಾಂಧಿ, ದೂರಕಲಿಕೆಯ ಸಾಧಕ

ನಾನು ಲೈಟ್ ಚಾನಲಿಂಗ್ ಮಾಡುವುದನ್ನು ಪ್ರತಿದಿನ ಅಭ್ಯಾಸ ಮಾಡುತ್ತಿದ್ದೇನೆ. ಈಗ ನನ್ನ ಮಗುವಿನೊಂದಿಗೆ ನಾನು ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದೇನೆಂದು ನನಗನಿಸುತ್ತದೆ. ಇದರ ಅಭ್ಯಾಸ ಮಾಡುವಾಗ ನನ್ನ ಶರೀರ ಹಗುರವಾದಂತೆ ಅನಿಸುತ್ತದೆ ಮತ್ತು ಅಭ್ಯಾಸದ ನಂತರ ಕಣ್ಣುಗಳನ್ನು ಬಿಡಬೇಕೆಂದೆನಿಸುವುದಿಲ್ಲ. ಈ ಮೂರು ದಿನಗಳಲ್ಲಿ ನಾನು ಮೈಗ್ರೇನ್ ಶಮನಕ್ಕಾಗಿ ಮಾತ್ರೆಗಳನ್ನು ಸೇವಿಸಿಲ್ಲ.

–ಶ್ರೀಮತಿ ಸುಗಂಧಿಯಾ, ಶಿಕ್ಷಕಿ, ವಿಶ್ವ ಶಿಷ್ಯ ವಿದ್ಯೋದಯ ಶಾಲೆ, ಪೊಲ್ಲಾಚಿ

ಲೈಟ್ ಚಾನಲಿಂಗ್ ಸೆಷನ್ ನಡೆಯುತ್ತಿರುವಾಗ ನನಗೆ ನನ್ನ ಕೈಗಳ ಇರುವಿಕೆಯ ಅನುಭವವಾಗಲಿಲ್ಲ. ನನ್ನ ಕಾಲುಗಳಲ್ಲಿ ಚೈತನ್ಯಗಳ ಅನುಭವವಾಯಿತು. ನನಗೆ ಆ ಸ್ಥಿತಿಯಿಂದ ಹೊರಬರಲು ಸ್ವಲ್ಪ ಸಮಯ ಬೇಕಾಯಿತು.

–ಶ್ರೀಮತಿ ಲತಾ, ಶಿಕ್ಷಕಿ, ವಿಶ್ವ ಶಿಷ್ಯ ವಿದ್ಯೋದಯ ಶಾಲೆ, ಪೊಲ್ಲಾಚಿ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಪಾಂಡುರಂಗ**

ಇಬ್ಬರು ತಪೋನಗರ ನಿವಾಸಿಗಳ ಕಥೆಯೊಂದು ಇಲ್ಲಿದೆ – ಇಲ್ಲಿಯ ಮಹಿಳೆಯೊಬ್ಬರು ತಮ್ಮ ತಾಯಿ ತಯಾರಿಸುತ್ತಿದ್ದ ಸ್ಥಳೀಯ ತಿಂಡಿಯನ್ನು ತಿನ್ನಲು ಹಂಬಲಿಸುತ್ತಿದ್ದರು. ಈ ಮಹಿಳೆ ಅದನ್ನು ತಾನೇ ತಯಾರಿಸಿಕೊಂಡು ಸವಿಯಬಹುದಿತ್ತು, ಆದರೆ ಅದು ದೂರದ ನಗರವೊಂದರಲ್ಲಿ ನೆಲೆಸಿರುವ ತನ್ನ ಅಮ್ಮ ತಯಾರಿಸಿ ಕೊಡುತ್ತಿದ್ದ ತಿಂಡಿಯ ರುಚಿಗೆ ಸರಿಸಾಟಿಯಾಗುತ್ತಿರಲಿಲ್ಲ. ಆಕೆ ಅತ್ಯುತ್ತಮ ರೆಸ್ಟೋರೆಂಟ್‌ಗೆ ಕೂಡಾ ಹೋಗಲು ಬಯಸಲಿಲ್ಲ, ಬದಲಿಗೆ, ಅದು ಮನೆಯಲ್ಲೇ ತಯಾರಿಸಿದ್ದಾಗಿರಬೇಕೆಂದು ಬಯಸಿದ್ದರು. ಯಾರೊಂದಿಗೂ ಹಂಚಿಕೊಳ್ಳದೆ ಮನಸ್ಸಿನಲ್ಲಿಯೇ ಉಳಿದಿದ್ದ ಆ ಆಸೆ ಮೂರು ದಿನಗಳವರೆಗೆ ಆಕೆಯಲ್ಲಿ ಮನೆಮಾಡಿತ್ತು.

ಈ ಮಹಿಳೆ ಒಂದು ದಿನ ಸಂಜೆ ತಮ್ಮ ಮನೆಯ ಮುಂದೆ ಓಡಾಡುತ್ತಿದ್ದಾಗ, ತಮ್ಮ ನಾಯಿಯನ್ನು ವಾಕಿಂಗ್‌ಗೆ ಕರೆದುಕೊಂಡು ಹೋಗುತ್ತಿದ್ದ ಶ್ರೀಮತಿ ಉಮಾ ಸುಧಾಕರ್‌ರವರು ಅವರನ್ನು ಕರೆದರು. ಈ ಮಹಿಳೆ ಒಂದು ತಾಸಿನವರೆಗೆ ಮನೆಯಲ್ಲಿಯೇ ಇರುತ್ತಾರೆ ಎಂದು ದೃಢಪಡಿಸಿಕೊಂಡ ಉಮಾರವರು ತಮ್ಮ ಮನೆಗೆ ಹಿಂದಿರುಗಿದರು. ಸ್ವಲ್ಪ ಸಮಯದ ನಂತರ, ಅವರು, ಈ ಮಹಿಳೆ ಮೂರು ದಿನಗಳಿಂದ ಹಂಬಲಿಸುತ್ತಿದ್ದ ಅದೇ ತಿಂಡಿಯನ್ನು ಬಿಸಿ ಬಿಸಿಯಾಗಿರುವಾಗಲೇ ಕಳಿಸಿಕೊಟ್ಟರು!

ಆಶ್ಚರ್ಯವೆಂದರೆ ಉಮಾರವರು ಯಾವತ್ತೂ ಈ ಮಹಿಳೆಯ ಮನೆಯ ಮುಂದೆ ವಾಕಿಂಗ್‌ಗೆ ಹೋದವರಲ್ಲ. ತಪೋನಗರದ ಸಂಜೆಯ ಪ್ರಶಾಂತ ವಾತಾವರಣದಲ್ಲಿ ಈ ಮೊದಲಾಗಲೀ ನಂತರವಾಗಲೀ ಅವರು ಪರಸ್ಪರ ಭೇಟಿಯಾದದ್ದಿಲ್ಲ. ಈ ತಿಂಡಿಯನ್ನು ತಯಾರಿಸಿದವರು, ಮತ್ಯಾರೂ ಆಗಿರದೆ ಪಾಕ ಪ್ರವೀಣೆಯೆನಿಸಿಕೊಂಡಿರುವ ಸ್ವತಃ ಉಮಾರವರೇ ಆಗಿದ್ದರು.

ಮೌನವಾಗಿ ಹುದುಗಿದ್ದ ಒಂದು ಸಣ್ಣ ಆಸೆ ಹೇಗೆ ಈಡೇರಿತು? ವೈವಿಧ್ಯತೆಯ ಹಿಂದೆ ಕಾಣದಂತಿದ್ದರೂ ಕೂಡ ಪ್ರತಿಯೊಬ್ಬರ ಹೃದಯಗಳಲ್ಲಿ ಕ್ರಿಯಾಶೀಲವಾಗಿರುವ ತಪೋನಗರದ ಏಕತೆಯ ಸ್ಫೂರ್ತಿಯೇ ಇದಕ್ಕೆ ಕಾರಣ. ಈ ಸ್ಫೂರ್ತಿಯ ಮತ್ತೊಂದು ಹೆಸರೇ ಗುರೂಜಿ ಕೃಷ್ಣಾನಂದ! ಈ ಆಧ್ಯಾತ್ಮಿಕ ಸಮುದಾಯವೇ, ಗುರೂಜಿಯವರ ತಪೋನಗರ ನಿವಾಸಿಗಳು ಮಹರ್ಷಿ ಅಮರರವರಿಗೆ, 2014ರ ಆಗಸ್ಟ್‌ನಲ್ಲಿ ಬರುವ ಅವರ 32ನೇ ಮಹಾಸಮಾಧಿ ದಿನದಂದು ಕೊಡುವ ಕಾಣಿಕೆಯಾಗಿದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿ ಹೀಗೆ ನುಡಿದರು

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಆಗಸ್ಟ್ 2004

'ದೇವರು'– ಇದು ನಮಗೆ ಚಿರಪರಿಚಿತ ಪದ, ಚಿರಪರಿಚಿತ ವ್ಯಕ್ತಿ. ದೇವರ ಅರ್ಥ ನಿರೂಪಿಸಲು ಮತ್ತು ಅವನನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಬಹಳ ಕಷ್ಟ, ಏಕೆಂದರೆ ಅವನು ಅರ್ಥ ನಿರೂಪಣೆಗಳನ್ನು ಮೀರಿದವನು. ನಾವು ಅರ್ಥಮಾಡಿಕೊಳ್ಳುವುದು ಬುದ್ಧಿಯ ಮೂಲಕ. ಆದರೆ ಬುದ್ಧಿಯು, ವ್ಯಾಪ್ತಿ ಮತ್ತು ಅರ್ಥವನ್ನು ತಿಳಿಯುವ ಒಂದು ಸಣ್ಣ ಉಪಕರಣ ಮಾತ್ರ, ಆದ್ದರಿಂದ ದೇವರನ್ನು ಅನುಭವಿಸಲು ನಾವು ಬುದ್ಧಿಯ ಮಿತಿಯನ್ನು ದಾಟಿ ಹೋಗಬೇಕು. ಅವನನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಅವನನ್ನು ನಾವು ಅನುಭವಿಸಬಹುದು. ಅವನನ್ನು ಸ್ವಲ್ಪ ಮಾತ್ರ ಅನುಭವಿಸುತ್ತೇವೆ, ನಾವು ಬೆಳೆದಂತೆಲ್ಲಾ ಇನ್ನೂ ಹೆಚ್ಚು ಅನುಭವಿಸುತ್ತೇವೆ. ಧ್ಯಾನದಲ್ಲಿ ಹೀಗೆ ಹೆಚ್ಚು ಹೆಚ್ಚಾಗಿ ಅನುಭವಿಸುತ್ತಾ ನಾವು ದೇವರನ್ನು ಅರಿಯುತ್ತೇವೆ. ಈ ಸೃಷ್ಟಿಯ ಎಲ್ಲೆಡೆ ಅವನಿದ್ದಾನೆ. ಎಲ್ಲ ವಿಶ್ವಗಳಲ್ಲೂ ಅವನಿದ್ದಾನೆ. ಎಲ್ಲ ಸ್ತರಗಳಲ್ಲೂ ಅವನಿದ್ದಾನೆ. ಪ್ರತಿಯೊಬ್ಬರಲ್ಲೂ, ಪ್ರತಿಯೊಂದರಲ್ಲೂ ಮತ್ತು ಎಲ್ಲೆಲ್ಲೂ ಚೈತನ್ಯವಾಗಿ, ಪ್ರಜ್ಞೆಯಾಗಿ ಅವನಿದ್ದಾನೆ. ಅವನನ್ನು ಸರ್ವವ್ಯಾಪಿ ಎಂದು ವರ್ಣಿಸುತ್ತಾರೆ. ಅವನು ಸರ್ವಜ್ಞ, ಅವನಿಗೆ ಎಲ್ಲವೂ ತಿಳಿದಿದೆ. ಎಲ್ಲ ವಿಶ್ವಗಳ, ಎಲ್ಲ ಸ್ತರಗಳ ಪ್ರತಿಯೊಂದರ ಅರಿವೂ ಅವನಿಗಿದೆ. ಭೂತ, ವರ್ತಮಾನ ಮತ್ತು ಭವಿಷ್ಯತ್ತಿನದೆಲ್ಲವೂ ಅವನಿಗೆ ಏಕಕಾಲದಲ್ಲಿಯೇ ತಿಳಿಯುತ್ತದೆ. ದೇವರನ್ನು ಸರ್ವಶಕ್ತನೆಂದೂ ವರ್ಣಿಸಲಾಗಿದೆ. ಅವನು ವಿಶ್ವಗಳನ್ನು ಸೃಷ್ಟಿಮಾಡುತ್ತಾನೆ ಹಾಗೂ ನಾಶಮಾಡುತ್ತಾನೆ. ಅವನು ಜೀವರಾಶಿಯನ್ನು ಸೃಷ್ಟಿಮಾಡುತ್ತಾನೆ ಹಾಗೂ ನಾಶಮಾಡುತ್ತಾನೆ. ದೇವರನ್ನು ನಾವು ಸ್ವಲ್ಪವಾದರೂ ತಿಳಿಯಬೇಕಾದರೆ, ಅವನು ಸರ್ವವ್ಯಾಪಿ, ಸರ್ವಜ್ಞ ಮತ್ತು ಸರ್ವಶಕ್ತನೆಂಬುದನ್ನು ನಾವು ನೆನಪುಮಾಡಿಕೊಳ್ಳಬೇಕು.

ಪ್ರಾರಂಭದಲ್ಲಿ ದೇವರು ಮೂರು ಬಹುದೊಡ್ಡ ಚೈತನ್ಯ ವಲಯಗಳನ್ನು ಸೃಷ್ಟಿಸಿದನು. ಅವು ಸೃಷ್ಟಿ, ಸ್ಥಿತಿ ಮತ್ತು ಲಯಕ್ಕಾಗಿ. ಹಾಗೂ ಈ ಚೈತನ್ಯ ವಲಯಗಳನ್ನು ನಿರ್ವಹಿಸುವುದಕ್ಕಾಗಿ ಮೂರು ವ್ಯಕ್ತಿಗಳನ್ನೂ ಅವನು ಸೃಷ್ಟಿಸಿದನು. ಅವರನ್ನು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೆಂದು ನಾವು ಕರೆಯುತ್ತೇವೆ. ವಿಶ್ವಗಳು, ಗ್ಯಾಲಕ್ಸಿಗಳು, ನಕ್ಷತ್ರಗಳು, ಭೂಮಿಗಳು, ಎಲ್ಲ ಜೀವರಾಶಿಗಳಾದ ಪ್ರಾಣಿಗಳು, ಪಕ್ಷಿಗಳು ಇತ್ಯಾದಿಗಳನ್ನು ಬ್ರಹ್ಮ ಸೃಷ್ಟಿಸಿದನು. ಈ ಸೃಷ್ಟಿಯನ್ನು ನೋಡಿಕೊಳ್ಳಲು ಇಂದ್ರ, ವಾಯು ಇತ್ಯಾದಿ ದೇವರುಗಳನ್ನೂ ಅವನು ಸೃಷ್ಟಿಸಿದನು. ಎಲ್ಲಾ ದೇವರುಗಳೂ ಪ್ರಜ್ಞಾ ಸಾಗರವಾದ ಪರಬ್ರಹ್ಮನ ಅಭಿವ್ಯಕ್ತಿಯಾಗಿದ್ದಾರೆ. ಈ ಎಲ್ಲ ವಿವರಣೆಗಳೂ 'ಆತ್ಮದ ಅವರೋಹಣ' ಪುಸ್ತಕದಲ್ಲಿದೆ. ಈ ಪುಸ್ತಕವನ್ನು ನಾವು ಒಮ್ಮೆ ಓದಿದರೆ ಸಾಲದು, ಪದೇ ಪದೇ ಓದಬೇಕು. ಪ್ರತಿ ಬಾರಿ ಓದಿದಾಗಲೂ ಅದು ಆಧ್ಯಾತ್ಮಿಕ ಪರಿಣಾಮವನ್ನುಂಟುಮಾಡುತ್ತದೆ. ಅದು ಪಾರಾಯಣ ಮಾಡಿದಂತೆ. ಅದನ್ನು ಓದಿದಾಗ ಕೆಲವೊಮ್ಮೆ ಮೆದುಳಿನ ಹೊಸ ಕೋಶಗಳು ತೆರೆದುಕೊಂಡು ಜ್ಞಾನವನ್ನು ನಾವು ನೇರವಾಗಿ ಪಡೆಯುತ್ತೇವೆ ಮತ್ತು ಕೆಲವು ಕರ್ಮಗಳು ಕೂಡ ದಹಿಸಿಹೋಗುತ್ತವೆ. ಪಠ್ಯಪುಸ್ತಕದಂತಿರುವ ಈ ಕಿರು ಹೊತ್ತಗೆಯು ವೇದಗಳ ಮತ್ತು ಉಪನಿಷತ್ತುಗಳ ಸಾರವನ್ನು ಹೊಂದಿದೆ.

ಬೆಳಕಿನ ದೇಹಗಳಲ್ಲಿ ಜನರು ನಿರಂತರವಾಗಿ ಜೀವಿಸುತ್ತಾರೆ; ಶಂಬಲದಲ್ಲಿರುವ ಜನರು ಬೆಳಕಿನ ದೇಹದಲ್ಲಿ ಜೀವಿಸುವುದರಿಂದಾಗಿ ಅವರು ಶಾಶ್ವತವಾಗಿ ಬದುಕುತ್ತಾರೆ. ಇದೇ ರೀತಿ ಆಂಜನೇಯ ಮತ್ತು ಬೇರೆ ಎಲ್ಲ ಚಿರಂಜೀವಿಗಳೂ ತಮ್ಮ ಬೆಳಕಿನ ದೇಹಗಳಲ್ಲಿ ಜೀವಿಸುತ್ತಿದ್ದಾರೆ ಮತ್ತು ಅವರಿಗೆ ಬೇಕಾದಾಗಲೆಲ್ಲ ಅವರು ಭೌತಿಕ ದೇಹವನ್ನು ಪಡೆಯಬಲ್ಲರು. ಅವರ ಬೆಳಕಿನ ದೇಹವನ್ನು ಭೌತಿಕ ದೇಹವನ್ನಾಗಿ ಅವರು ಪರಿವರ್ತಿಸಿಕೊಳ್ಳಬಲ್ಲರು.

ಮುಂಬಯಿ ಪಟ್ಟಣದಿಂದ ಬಂದ ಸುಮಾರು 24–25 ವರ್ಷದ ಯುವಕನೊಬ್ಬನನ್ನು ಎರಡು ದಿನದ ಹಿಂದೆ ನಾನು ಭೇಟಿ ಮಾಡಿದೆ. ಬಹಳ ದಿನಗಳಿಂದಲೂ ಅವನು ನನ್ನನ್ನು ಭೇಟಿಮಾಡಲು ಬಯಸಿದ್ದ. ಅವನು ಅತ್ಯಂತ ಉತ್ಸುಕನಾಗಿ ನನಗೆ ಹೇಳಿದ, "ನಾನು ದೇವರನ್ನು ಅನುಭವಿಸಬೇಕು. ನನಗೆ ಶಕ್ತಿಗಳು, ಸೂಕ್ಷ್ಮ ದೇಹದ ಪ್ರಯಾಣ ಇತ್ಯಾದಿಗಳ ಬಗ್ಗೆ ಆಸಕ್ತಿ ಇಲ್ಲ". ಇಷ್ಟೊಂದು ಎಳೆಯ ವಯಸ್ಸಿನಲ್ಲಿಯೇ ಇಂಥ ಹಂಬಲವಿರುವುದು ನನಗೆ ಆಶ್ಚರ್ಯ ತರಲಿಲ್ಲ, ಏಕೆಂದರೆ ಆ ರೀತಿಯ ಜನರನ್ನು ನಾನು ಭೇಟಿಮಾಡಿದ್ದೇನೆ. ಅವರ ದೇಹಗಳು ಎಳೆಯದಾಗಿದ್ದರೂ, ದೇವರನ್ನು ಅನುಭವಿಸುವ ಹಂಬಲ ಅವರಲ್ಲಿ ಜೀವಂತವಾಗಿರುತ್ತದೆ. ಇದಕ್ಕೆ ಕಾರಣ ಅವರ ಹಿಂದಿನ ಜನ್ಮಗಳ ಸಾಧನೆ. ಇಂಥಹ ಹೆಚ್ಚು ಆತ್ಮಗಳು ನಮ್ಮಲ್ಲಿಗೆ ಬರಲಿ ಎಂದು ನಾನು ಬಯಸುತ್ತೇನೆ. ನಮ್ಮಲ್ಲಿ ಅನೇಕರಲ್ಲಿ ಈ ರೀತಿಯ ಹಂಬಲ ಇಲ್ಲದಿರಬಹುದು. ಋಷಿಗಳ ಹತ್ತಿರ ಬಂದಿರುವವರು ಅಪಾರವಾದ ಸಾಧನೆ ಮಾಡಿರುತ್ತಾರೆ. ಅದನ್ನು ಅವರು ಮುಂದುವರಿಸಬೇಕು. ಆಕಸ್ಮಿಕವಾಗಿ ಈ ಮಾರ್ಗಕ್ಕೆ ಯಾರೂ ಬರುವುದಿಲ್ಲ; ಎಲ್ಲರೂ ಯಾವುದೋ ಒಂದು ಅಪೇಕ್ಷೆ ಇಟ್ಟುಕೊಂಡು ಬರುತ್ತಾರೆ. ದೇವರು ಮತ್ತು ಸೂಕ್ಷ್ಮ ಲೋಕಗಳ ಮಾಸ್ಟರ್‌ಗಳು ನಮ್ಮನ್ನು ಇಲ್ಲಿಗೆ ಕರೆತರುತ್ತಾರೆ. ನಮಗೆ ಇಲ್ಲಿ ಪೂರ್ಣ ಸ್ವಾತಂತ್ರ್ಯವಿದೆ, ಸ್ವಾತಂತ್ರ್ಯದಲ್ಲಿ ಮಾತ್ರ ಅತ್ಯಧಿಕ ಬೆಳವಣಿಗೆ ಸಾಧ್ಯ. ಇಲ್ಲಿ ಸ್ವಾತಂತ್ರ್ಯವಿರುವುದರಿಂದ ಮತ್ತು ನಾವು ಜನರನ್ನು ಹಿಡಿದಿಟ್ಟುಕೊಳ್ಳದಿರುವುದರಿಂದ, ಜನರು ಈ ಅವಕಾಶಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಮೂರು ರೀತಿಯ ಜನರಿದ್ದಾರೆ: ವಿಶ್ರಮಿಸುವುದಕ್ಕಾಗಿಯೇ ಧ್ಯಾನವನ್ನು ತೆಗೆದುಕೊಳ್ಳುವವರು ಒಂದು ಬಗೆ, ಅವರಿಗೆ ಗುರಿ ಸ್ಪಷ್ಟವಿದೆ. ಮತ್ತೊಂದು ರೀತಿಯ ಜನರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹಾಗೂ ಆಧ್ಯಾತ್ಮಿಕವಾಗಿ ಬೆಳೆಯಲು ಬರುತ್ತಾರೆ. ಮೂರನೆಯ ವರ್ಗದವರು ಋಷಿಗಳ ಕೆಲಸ ಮಾಡುವುದಕ್ಕೆ ಮುಂದಾಗುತ್ತಾರೆ. ಪ್ರಮುಖವಾಗಿ ಕಾರ್ಯಕರ್ತರ ವರ್ಗ ಮತ್ತು ಇಲ್ಲಿಯೇ ನೆಲಸಿರುವವರಲ್ಲಿ "ನಾನು ದೇವರನ್ನು ಅನುಭವಿಸಬೇಕು, ನನಗೆ ದಾರಿ ತೋರಿಸಿ" ಎನ್ನುವಂತಹ ಹಂಬಲವಿರಬೇಕೆಂದು ನಾನು ಬಯಸುತ್ತೇನೆ, ಕಾರಣವೆಂದರೆ ಅಂಥ ಆತ್ಮಗಳು ನಮ್ಮಲ್ಲಿಗೆ ಬಂದಾಗ ಅವರಲ್ಲಿ ಯಾವುದೇ ಸ್ವಂತ ಕಾರ್ಯಕ್ರಮಗಳಿರುವುದಿಲ್ಲ. ಅವರು ಋಷಿಗಳ ಕಾರ್ಯಕ್ರಮವನ್ನು ಅನುಸರಿಸುತ್ತಾರೆ. ಋಷಿಗಳು ವೇಳಾಪಟ್ಟಿಯನ್ನು ಕೊಟ್ಟು, ಇವು ನಿರ್ಧಾರಿತವಾಗಿರುವ ವಿಧಾನಗಳು ಎಂದು ಹೇಳುತ್ತಾರೆ. ಹಾಗೂ ತಂತ್ರಗಳನ್ನು ನಮಗೆ ಕೊಡುತ್ತಾರೆ. ಋಷಿಗಳ ಕಾರ್ಯವನ್ನು ಕೈಗೊಂಡಿರುವ ಜನರು, ಅವುಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡದೆ ಕೊಟ್ಟಿರುವುದನ್ನಷ್ಟೇ ಅನುಸರಿಸುತ್ತಾರೆ. ಹಾಗೂ, ಇಲ್ಲಿ ಕೊಟ್ಟಿರುವ ಸ್ವಾತಂತ್ರ್ಯವನ್ನು ಅವರೆಂದೂ ದುರುಪಯೋಗಪಡಿಸಿಕೊಳ್ಳುವುದಿಲ್ಲ. ಅವರು ಸಾಧನೆಯನ್ನು ಅಲಕ್ಷಿಸುವುದಿಲ್ಲ ಮತ್ತು ಋಷಿಗಳನ್ನೆಂದೆಂದಿಗೂ ನಿರ್ಲಕ್ಷಿಸುವುದಿಲ್ಲ. ಅಂಥ ಜನರಿಗಾಗಿ ನಾನು ಕಾಯುತ್ತಿದ್ದೇನೆ.

ನಾವು ಧ್ಯಾನದಲ್ಲಿ ನಿಮಗೆ ಊಹಿಸಿಕೊಳ್ಳಲು ಹೇಳುವ ಬೆಳಕುಗಳು ಮತ್ತು ಬಣ್ಣಗಳು ಸೂಕ್ಷ್ಮಮಟ್ಟದ್ದಾಗಿರುವುದರಿಂದಾಗಿ ಅವುಗಳನ್ನು ನೋಡುವುದು ಕಷ್ಟ, ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಬೆಳಕಿನ ಬಗ್ಗೆ ಯೋಚಿಸಿ ಎಂದು ನಾವು ಹೇಳಿದಾಗ, ನೀವು ಬೆಳಕನ್ನು ಕಲ್ಪಿಸಿಕೊಳ್ಳಿ; ಅದರ ಬಗ್ಗೆ ಅಲೋಚಿಸಿ, ನೀವು ಅದನ್ನು ನೋಡಬೇಕಾಗಿಲ್ಲ.

ಚಿಂತನೆಗೆ ವಿಚಾರಗಳು: ನಮ್ಮ ಬಯಕೆಗಳನ್ನು ಸಂಸ್ಕರಿಸಿಕೊಳ್ಳುವುದೇ ವೈರಾಗ್ಯ. ನಾವು ಅನುಭವಿಸುವ ಭೌತಿಕ, ಮಾನಸಿಕ ಮತ್ತು ವೈಚಾರಿಕ ಮಟ್ಟಗಳ ನೋವುಗಳಲ್ಲಿ ಬಹುತೇಕವಾದವುಗಳು ನಾವು ಮತ್ತೊಬ್ಬರಿಗೆ ಉಂಟುಮಾಡಿದ್ದೇ ಆಗಿರುತ್ತವೆ, ಅದು ಇಂದಿನದಲ್ಲದಿದ್ದರೂ ಹಿಂದೆ ಯಾವಾಗಲೋ ಮಾಡಿದ್ದಾಗಿರುತ್ತದೆ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

27–04–2014

ಸ್ವಾಮಿ ವಿವೇಕಾನಂದರ ಒಂದು ಸುಂದರ ಹೇಳಿಕೆಯನ್ನು ಓದಿದೆ. ಅವರು ಹೇಳುತ್ತಾರೆ, "ತಪ್ಪುಗಳನ್ನು ಹುಡುಕುವುದು ಬಹಳ ಸುಲಭ ಆದರೆ ಒಬ್ಬ ಸಂತನ ವೈಶಿಷ್ಟ್ಯತೆ ಅಡಗಿರುವುದು ಅರ್ಹತೆಗಳನ್ನು ಹುಡುಕುವುದರಲ್ಲಿ." ಈ ನಿಯಮವನ್ನು ಗುರೂಜಿಯವರಲ್ಲಿ ನಾವು ನೋಡಿದೆವು. ಅವರು ಈ ನಿಯಮವನ್ನು ಸಂಪೂರ್ಣವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಜನರೊಂದಿಗಿನ ನಮ್ಮ ಸಂಪರ್ಕವನ್ನು ಉನ್ನತಮಟ್ಟಕ್ಕೆ ಅಂದರೆ ಆತ್ಮದ ಮಟ್ಟಕ್ಕೆ ಬದಲಾಯಿಸಿಕೊಂಡಾಗ ಸಹಜವಾಗಿಯೇ ಮತ್ತೊಬ್ಬರಲ್ಲಿ ನಾವು ಅರ್ಹತೆಗಳನ್ನಷ್ಟೇ ನೋಡುತ್ತೇವೆ, ಯಾವುದೇ ತಪ್ಪುಗಳನ್ನು ನಾವು ನೋಡುವುದಿಲ್ಲ. ಆದರೆ ನಮ್ಮ ಸಂಪರ್ಕ ತೋರಿಕೆಯದಾಗಿದ್ದರೆ ಅಂದರೆ ಅಹಂನ ಮಟ್ಟದ್ದಾಗಿದ್ದರೆ ಸಹಜವಾಗಿಯೇ ನಾವು ತಪ್ಪುಗಳನ್ನು ನೋಡುತ್ತೇವೆ, ಏಕೆಂದರೆ ಇತರರಿಗಿಂತ ತಾನು ಶ್ರೇಷ್ಠ ಎಂಬ ಭಾವನೆಯನ್ನು ಅಹಂ ಆನಂದಿಸುತ್ತದೆ.

01–06–2014

'ಪ್ರಾಣಿಕ್ ಹೀಲರ್ ಅಥವಾ ರೇಖಿ ಹೀಲರ್ ಅಥವಾ ಬೇರಾವುದೇ ಹೀಲರ್ ಬಳಿಗೆ ನಾವು ಹೋಗಬೇಕೇ' ಎಂದು ಒಬ್ಬ ವ್ಯಕ್ತಿ ನನ್ನನ್ನು ಕೇಳಿದರು. ಹೋಗುವುದು ಅಥವಾ ಹೋಗದಿರುವುದನ್ನು ನಿರ್ಧರಿಸುವುದು ಆ ವ್ಯಕ್ತಿಗೆ ಬಿಟ್ಟ ವಿಷಯ. ಆದರೆ ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ಋಷಿಗಳ ಮಾರ್ಗದರ್ಶನದಲ್ಲಿ ನಾವು ಧ್ಯಾನವನ್ನು ಕಲಿಯುತ್ತಿರುವುದರಿಂದಾಗಿ ಬೇರೆಲ್ಲಿಗೂ ನಾವು ಹೋಗಬೇಕಾಗಿಲ್ಲ. ಇಲ್ಲಿಯೇ ಎಲ್ಲವೂ ನಮಗೆ ಲಭ್ಯವಿದೆ. ಮಾಸ್ಟರ್‌ಗಳಾದ ಋಷಿಗಳು ಕೆಳತಂದ ಹೀಲಿಂಗ್ ಚೈತನ್ಯಗಳನ್ನು ತಪೋನಗರದಲ್ಲಿ ಶೇಖರಿಸಲಾಗಿದ್ದು, ಅವು ನಮಗೆ ಲಭ್ಯವಿದೆ. ನಮಗೆ ಹೀಲಿಂಗ್ ಬೇಕಾದಾಗ ಈ ಚೈತನ್ಯಗಳನ್ನು ಬಳಸಿಕೊಳ್ಳಬಹುದು. ಈ ಚೈತನ್ಯಗಳ ಮೇಲ್ವಿಚಾರಕಿ ಸಂತೋಷಿ ದೇವಿ.

ಚಕ್ರದಲ್ಲಿ ಅಥವಾ ಶಾರೀರಿಕ ವ್ಯವಸ್ಥೆಯಲ್ಲಿ ಅಡಚಣೆಗಳಿವೆ(ಬ್ಲಾಕ್) ಅಥವ ಚೈತನ್ಯಗಳಲ್ಲಿ ಅಸಮತೋಲನವಿದೆ ಎಂದು ಕೆಲವೊಮ್ಮೆ ಹೇಳುತ್ತಾರೆ. ಆ ಅಡಚಣೆಯನ್ನು ನಾವು ನೋಡಬಲ್ಲೆವು ಮತ್ತು ಚೈತನ್ಯಗಳನ್ನು ಹರಿಸಿ ಅವುಗಳನ್ನು ತೆಗೆದುಹಾಕಬಲ್ಲೆವು ಎಂದು ಹೀಲರ್‌ಗಳು ಹೇಳುತ್ತಾರೆ. ಅವರುಗಳಿಗೆ ಆ ಶಕ್ತಿ ಇದ್ದಿರಬಹುದು, ಆದರೆ ಧ್ಯಾನಮಾಡುವುದು ಅತ್ಯುತ್ತಮ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ನಾವು ಧ್ಯಾನ ಮಾಡಿದಾಗ ಎಲ್ಲ ಅಡಚಣೆಗಳೂ ಇಲ್ಲವಾಗುತ್ತವೆ. ಎಲ್ಲ ಚೈತನ್ಯಗಳ ಅಸಮತೋಲನವೂ ಸರಿಹೋಗುತ್ತದೆ. ಧ್ಯಾನವು ನಮಗೆ ಎಲ್ಲವನ್ನೂ ಕೊಡುತ್ತದೆ. ನಮಗೆ ಹುಶಾರಿಲ್ಲದಿದ್ದಾಗ ನಾವು ವೈದ್ಯರ ಬಳಿಗೆ ಹೋಗಿ ಔಷಧಿಗಳನ್ನು ತೆಗೆದುಕೊಳ್ಳಬಹುದು ಮತ್ತು ಜೊತೆಜೊತೆಗೆ ಸ್ವಯಂ–ಹೀಲಿಂಗ್ ಅನ್ನು ಅಭ್ಯಾಸಮಾಡಬಹುದು ಎಂದು ಗುರೂಜಿಯವರು ಹೇಳಿದ್ದಾರೆ. ಮತ್ತೆಲ್ಲಿಗಾದರೂ ಹೋಗುವುದಕ್ಕೆ ಬದಲು ಇದು ಅತಿ ವಿವೇಚನಾಯುಕ್ತವಾದುದು.

ಹೀಲಿಂಗ್ ಒಂದು ಉದಾತ್ತ ಕೆಲಸ. ಆದರೆ ಕೆಲವೊಮ್ಮೆ ಕೆಲವರು ನಮಗೆ ತಪ್ಪು ಮಾರ್ಗದರ್ಶನ ನೀಡುತ್ತಾರೆ. ಯಾರಾದರೂ ಒಂದು ಬ್ಲಾಕ್ ಇದೆ ಎಂದು ಹೇಳಿದಾಗ ಸಹಜವಾಗಿಯೇ ನಾವು ಚಿಂತೆಗೀಡಾಗುತ್ತೇವೆ. ಒಬ್ಬ ಶುದ್ಧ ಹೀಲರ್ ಈ ರೀತಿಯ ಭಯವನ್ನು ನಮ್ಮಲ್ಲಿ ಬಿತ್ತಬಾರದು. ಇದು ಸಕಾರಾತ್ಮಕವಾದುದಲ್ಲ. ಅದೊಂದು ದುಷ್ಟ ವ್ಯಕ್ತಿಗಳ ಮಾರ್ಗ. ಅದೇನೇ ಇದ್ದರೂ, ನಿರ್ಧಾರವು ಆ ವ್ಯಕ್ತಿಗೆ ಬಿಟ್ಟ ವಿಚಾರ.

ನನಗೆ ಕೇಳಿದ ಮತ್ತೊಂದು ಪ್ರಶ್ನೆಯೆಂದರೆ, 'ಮನೆಯನ್ನು ಚೈತನ್ಯೀಕರಿಸಲು ಅಥವ ನಮಗೆ ಒಳ್ಳೆಯ ಅದೃಷ್ಟವನ್ನು ತರಲು ಯಂತ್ರಗಳನ್ನು ನಾವು ಬಳಸಬೇಕೆ?'

ನಾನು ಅರ್ಥಮಾಡಿಕೊಂಡಿರುವ ಪ್ರಕಾರ ನಾವು ಯಂತ್ರಗಳನ್ನು ಉಪಯೋಗಿಸಬೇಕಾಗಿಲ್ಲ. ಯಂತ್ರಗಳು ಪ್ರಭಾವ ಬೀರಬಹುದು, ಫಲ ನೀಡಬಹುದು. ಆದರೆ ನಮ್ಮ ದೇಹವೇ ಒಂದು ಯಂತ್ರವಿದ್ದಂತೆ, ಒಂದು ಉಪಕರಣವಿದ್ದಂತೆ, ಎಂದು ಗುರೂಜಿಯವರು ಹೇಳಿದ್ದರು. ಯಾವ ಯಂತ್ರವೂ ಸಂಗ್ರಹಿಸಿಡಲಾರದಷ್ಟು ಚೈತನ್ಯಗಳನ್ನು ಅದು ಸಂಗ್ರಹಿಸಿಡಬಲ್ಲುದು. ನಮಗೆ ಹೊರಗಿನ ಯಂತ್ರಗಳು ಬೇಕಾಗಿಲ್ಲ. ನಾವು ನಿಯಮಿತವಾಗಿ ಧ್ಯಾನ ಮಾಡಿದರೆ, ನಮ್ಮನ್ನು ಶುದ್ಧವಾಗಿರಿಸಿ ಕೊಂಡರೆ, ಅಪಾರವಾದ ಚೈತನ್ಯಗಳನ್ನು ನಮ್ಮಲ್ಲಿ ಹೊಂದಿರುತ್ತೇವೆ. ಭಯವನ್ನು ಬಿತ್ತುವ ಜನರ ಬಲೆಗೆ ಬೀಳದಂತೆ ನಾವು ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಶಾಂತಿಯನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ಹಣವನ್ನೂ ಕಳೆದುಕೊಳ್ಳಬಹುದು. ಋಷಿಗಳ ವಿಧಾನಗಳು ಯಾವಾಗಲೂ ಸಕಾರಾತ್ಮಕ ವಾದವುಗಳು. ಅಲ್ಲಿ ಉತ್ತೇಜನವಿರುತ್ತದೆ, ಆಶಾಭಾವನೆ ಮೂಡುತ್ತದೆ ಆದರೆ ಭಯವನ್ನು ಎಂದಿಗೂ ಬಿತ್ತುವುದಿಲ್ಲ.

ನಾವು ಇಲ್ಲಿ ಅರ್ಥಮಾಡಿಕೊಂಡಿರುವಂತೆ, ಸಾಧನೆಯಲ್ಲಿ ಎರಡು ಭಾಗವಿದೆ. ಒಂದನೆಯದು ಅಭ್ಯಾಸದ ಭಾಗ– ದೈವವನ್ನು ಅನುಭವಿಸಲು ಸಹಾಯ ಮಾಡುವ ಧ್ಯಾನ ಮತ್ತು ಅದಕ್ಕೆ ಸಂಬಂಧಿಸಿದ ಇತರ ತಂತ್ರಗಳ ಅಭ್ಯಾಸ. ಸಕಾರಾತ್ಮಕ ಜೀವನ ನಡೆಸಲು ಇದು ನಮಗೆ ಸಹಾಯ ಮಾಡುತ್ತದೆ. ಎರಡನೆಯ ಭಾಗವೆಂದರೆ, ಜ್ಞಾನ ಮತ್ತು ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು; ಇದು ಕೂಡ ಒಂದನೆಯ ಭಾಗದಷ್ಟೇ ಮುಖ್ಯ. ಜೀವನಕ್ಕೆ ಹಲವಾರು ಸ್ತರಗಳು ಅಥವ ಅಂಶಗಳು ಇವೆ. ಜೀವನದ ಈ ಎಲ್ಲ ಅಂಶಗಳನ್ನು (ಸಂಗೀತ, ಸಾಹಿತ್ಯ, ಕಲೆ) ನಾವು ಪ್ರಯತ್ನಿಸಬೇಕು ಮತ್ತು ಅನುಭವಿಸಬೇಕು. ಬಹು ಮುಖ್ಯವಾದ ಭಾಗವೆಂದರೆ ಜನರೊಂದಿಗಿನ ನಮ್ಮ ಒಡನಾಟ; ನಮ್ಮ ಆಧ್ಯಾತ್ಮಿಕ ಬೆಳವಣಿಗೆಯ ನಿಜವಾದ ಪರೀಕ್ಷೆಯಾಗುವುದು ಇಲ್ಲಿಯೇ. ನಮ್ಮ ಒಡನಾಟಕ್ಕೆ ಪ್ರೀತಿ ಆಧಾರವಾಗಿದ್ದರೆ, ಜನರೊಂದಿಗಿನ ನಮ್ಮ ಸಂಬಂಧ ಅತ್ಯುತ್ತಮದ್ದಾಗಿರುತ್ತದೆ. ಯಾವುದೇ ಸಮಸ್ಯೆಯಿರುವುದಿಲ್ಲ. ನಿರೀಕ್ಷೆಗಳಿಲ್ಲದಿದ್ದಾಗ ಸಮಸ್ಯೆಗಳೂ ಇರುವುದಿಲ್ಲ. ಆದ್ದರಿಂದ, ಈ ಎಲ್ಲ ನಿಯಮಗಳನ್ನು ಮತ್ತು ಇಲ್ಲಿ ಪಡೆಯುವ ಎಲ್ಲ ಜ್ಞಾನವನ್ನು, ನಾವು ನಿಜವಾಗಿಯೂ ಪ್ರಜ್ಞಾಪೂರ್ವಕವಾಗಿ ಬಳಸಬೇಕಾಗಿರುವುದು ಜನರೊಂದಿಗೆ ವ್ಯವಹರಿಸುವಾಗ. ಯಾರೊಂದಿಗೇ ಆದರೂ ಪ್ರತಿಕ್ರಿಯಿಸುವ ಮುಂಚೆ ಕೆಲ ಕ್ಷಣ ತಡೆದರೆ ನಿಯಮಕ್ಕೆ ಸಂಪರ್ಕಗೊಳ್ಳಲು ಸಹಾಯವಾಗುತ್ತದೆ, ಆಗ ನಮ್ಮ ಪ್ರತಿಕ್ರಿಯೆ ಸಮರ್ಪಕವಾಗಿರುತ್ತದೆ.

ಧ್ಯಾನ ಮಾಡುವುದೆಂದರೆ ಸಕಾರಾತ್ಮಕತೆಯೆಡೆಗೆ, ದೇವರೆಡೆಗೆ ಒಂದು ಹೆಜ್ಜೆಯಿಟ್ಟಂತೆ. ನಾವು ಹಾಗೆ ಮಾಡಿದಾಗ, ದೇವರು ಕೂಡ ನಮ್ಮ ಬಳಿಗೆ ಬರಲು ಹತ್ತಾರು ಹೆಜ್ಜೆಗಳನ್ನಿಡುತ್ತಾನೆ. ಧ್ಯಾನದಲ್ಲಿ ನಾವು ಅಧ್ಯಾತ್ಮ ಅನುಭವಮಾತ್ರವಲ್ಲದೆ ಅಪಾರವಾದ ಚೈತನ್ಯಗಳನ್ನೂ ಪಡೆಯುತ್ತೇವೆ. ಈ ಚೈತನ್ಯಗಳು ಶುದ್ಧೀಕರಿಸುತ್ತವೆ, ನಮ್ಮ ಶಾರೀರಿಕ ವ್ಯವಸ್ಥೆಯನ್ನು ಶುದ್ಧಗೊಳಿಸುತ್ತವೆ; ಅಲ್ಲಿ ನಕಾರಾತ್ಮಕ ಚೈತನ್ಯಗಳಿದ್ದರೆ ಅವುಗಳನ್ನು ತೆಗೆದುಹಾಕುತ್ತವೆ. ಪರಿಶುದ್ಧ ಜೀವನವನ್ನು ನಡೆಸಲು ನಮಗೆ ಬಹಳ ಆತ್ಮಶಕ್ತಿಯನ್ನು ಕೂಡ ನೀಡುತ್ತವೆ. ಧ್ಯಾನದಲ್ಲಾಗುವ ಅನುಭವವು ಸಕಾರಾತ್ಮಕತೆಯ ಕಡೆಗೆ, ನಿಯಮಗಳನ್ನಾಧರಿಸಿದ ಜೀವನವನ್ನು ನಡೆಸುವ ಕಡೆಗೆ ಹೋಗಲು ಉತ್ತೇಜನವನ್ನೂ ನೀಡುತ್ತದೆ. ಆದರೆ ನಮ್ಮ ನಕಾರಾತ್ಮಕ ಪ್ರವೃತ್ತಿಗಳಿಗೆ ನಾವು ಹಿಂದಿರುಗಿದರೆ ಈ ನಕಾರಾತ್ಮಕ ಚೈತನ್ಯಗಳನ್ನು ಪುನಃ ಆಕರ್ಷಿಸುತ್ತೇವೆ. ಧ್ಯಾನ ಮಾಡುವಾಗ ಸಂಗ್ರಹಿಸಿದ್ದ ಸಕಾರಾತ್ಮಕ ಚೈತನ್ಯಗಳೆಲ್ಲವನ್ನೂ ಕಳೆದುಕೊಳ್ಳುತ್ತೇವೆ. ಹೀಗಾದಾಗ ಮುಂದುವರಿಯಲಾಗದೆ ನಾವು ಇದ್ದಲ್ಲೇ ಇರುತ್ತೇವೆ. ದೇವರೆಡೆಗಿನ ನಮ್ಮ ಪ್ರಯಾಣ ನಿಲ್ಲುತ್ತದೆ. ಧ್ಯಾನದಲ್ಲಿ ನಾವು ಸಂಗ್ರಹಿಸಿದ ಚೈತನ್ಯಗಳನ್ನು ಕಳೆದುಕೊಳ್ಳಲು ಒಮ್ಮೆ ಸಿಡಿದ ಕೋಪವೇ ಸಾಕು, ಎಂದು ಗುರೂಜಿಯವರು ನಮಗೆ ಹೇಳುತ್ತಿದ್ದುದು ನನಗೆ ನೆನಪಿದೆ.

ಶಂಬಲದ ಎರಡನೇ ನಿಯಮವನ್ನು ಅಭ್ಯಾಸಮಾಡುವಾಗ ಪ್ರೀತಿಯನ್ನು ಹರಡುವುದರ ಜೊತೆಗೆ ಪ್ರೀತಿಯ ಇತರೆ ಅಂಶಗಳನ್ನೂ ಅಭ್ಯಾಸಮಾಡಲು ಗುರೂಜಿಯವರು ನಮಗೆ ಹೇಳಿದ್ದರು, ಅವೆಂದರೆ 'ಎಲ್ಲರನ್ನೂ ಪ್ರೀತಿಸಿ. ಯಾರನ್ನೂ ದ್ವೇಷಿಸಬೇಡಿ. ಕ್ಷಮಿಸಿ. ಬೇರೆಯವರ ಯೋಗ್ಯತೆಯನ್ನು ನಿರ್ಧರಿಸಬೇಡಿ. ಎಲ್ಲರನ್ನೂ, ಎಲ್ಲವನ್ನೂ ಗೌರವಿಸಿ ಮತ್ತು ಆತ್ಮದ ಮಟ್ಟದಲ್ಲಿ ಎಲ್ಲರನ್ನೂ ಸಂಪರ್ಕಿಸಿ.' ಶಂಬಲದ ಎರಡನೇ ನಿಯಮಕ್ಕೆ ಸಂಬಂಧಿಸಿದ ಈ ವಿಶೇಷ ಸೂಚನೆಗಳನ್ನು ಅಭ್ಯಾಸಮಾಡಲು ನಮಗೆ ಸಾಧ್ಯವಾದರೆ, ನಾವು ಎಲ್ಲಾ ನಿಯಮಗಳನ್ನೂ ಅಭ್ಯಾಸಮಾಡುತ್ತಿರುತ್ತೇವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಹರ್ಷಿ ಅಮರ

**ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಮಹರ್ಷಿ ಅಮರರವರು ಒಬ್ಬ ಅತ್ಯುನ್ನತ ಶ್ರೇಣಿಯ ಮಾಸ್ಟರ್ ಆಗಿದ್ದರು. ಋಷಿಗಳ ಹೊಸಯುಗದ ಕನಸನ್ನು ಅವರು ತಮ್ಮಲ್ಲಿ ಹೊಂದಿದ್ದರು. ಈ ಭೂಮಿಯ ಮೇಲೆ ಹೊಸಯುಗವನ್ನು ಸ್ಥಾಪಿಸಲು ಸೂಕ್ಷ್ಮ ಮಟ್ಟದಲ್ಲಿ ಅವರು ಅನೇಕ ಕಾರ್ಯಗಳನ್ನು ಮಾಡಿದ್ದರು.

ಅವರು ನಮ್ಮ ಗುರೂಜಿಯವರಿಗೆ ಒಂದು ದೂರದೃಷ್ಟಿ ಮತ್ತು ಒಂದು ನಿರ್ದಿಷ್ಟ ಕಾರ್ಯವನ್ನು ನೀಡಿದ್ದರು. ಅಲ್ಲದೆ ಗುರೂಜಿಯವರ ಮುಖಾಂತರ ನಮಗೆ ಅವರು ತಪೋನಗರವನ್ನು ನೀಡಿದರು. ಅವರು ನಮಗೆ, ಅತ್ಯಂತ ವಿರಳವಾದ ಜ್ಞಾನ ಹಾಗೂ ಚೈತನ್ಯಗಳನ್ನು, ಅಪರೂಪದ ಮತ್ತು ವಿಶಿಷ್ಟವಾದ ತಂತ್ರಗಳನ್ನು, ಅಜ್ಞಾತ ಸತ್ಯಗಳನ್ನು ಪರಿಶೋಧಿಸುವ ಎಲ್ಲಾ ಅವಕಾಶಗಳನ್ನು ಹೊಂದಿರುವ ಈ ಮಾರ್ಗವನ್ನು ನೀಡಿದರು. ಅವರು ನಮಗೆ ಕೊಟ್ಟ ವ್ಯವಸ್ಥೆಯು, ನಿಯಮಗಳ ಸುತ್ತ ನಿರ್ಮಾಣಗೊಂಡದ್ದು, ವ್ಯಕ್ತಿಗಳ ಸುತ್ತ ಅಲ್ಲ. ಅಮರರವರು ಸ್ವತಃ ಒಂದು ನಿಯಮವನ್ನು ಪ್ರತಿನಿಧಿಸುತ್ತಾರೆ ಮತ್ತು ಸಪ್ತ ಋಷಿಗಳು ಕೂಡಾ ಒಂದು ನಿಯಮವನ್ನು ಪ್ರತಿನಿಧಿಸುತ್ತಾರೆ.

ಅವರು ನಮಗೆ ಹೊಸಯುಗದ ನಿಯಮಗಳನ್ನು ಕಲಿಸಿದರು ಮತ್ತು ಭವಿಷ್ಯದ ಹೊಸ ಧರ್ಮವಾದ ವಿಶ್ವಾತ್ಮಕ ನಿಯಮಗಳನ್ನು ಕೊಟ್ಟರು. ಅವರು ಉಪನ್ಯಾಸಗಳನ್ನು ಮಾಡಲಿಲ್ಲ, ಆದರೆ ಕಲಿಸಿ ಕೊಟ್ಟರು; ಅವರು ಆಧ್ಯಾತ್ಮಿಕತೆಯನ್ನು ಬೌದ್ಧೀಕರಿಸಲಿಲ್ಲ, ಆದರೆ ಜೀವನವನ್ನು ವಿವೇಕಯುಕ್ತವಾಗಿ ಜೀವಿಸಲು ಮತ್ತು ಆಧ್ಯಾತ್ಮಿಕವಾಗಿ ಬೆಳೆಯಲು ಕಾರ್ಯರೂಪದ ಪಾಠಗಳನ್ನು ಕೊಟ್ಟರು. ಅವರು ಜೀವನದಲ್ಲಿ ಸಮತೋಲನಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು ಮತ್ತು ಲೌಕಿಕ ಹಾಗೂ ಆಧ್ಯಾತ್ಮಿಕ ಜೀವನವೆರಡರ ನಡುವೆ ಸಮತೋಲನವನ್ನು ಕಾಪಾಡಿಕೊಂಡು ಹೇಗೆ ಜೀವಿಸುವುದು ಎಂದು ಸ್ಪಷ್ಟ ಮಾರ್ಗದರ್ಶನ ನೀಡಿದರು. ಅವರು ಜೀವನವನ್ನು ಸಂಭ್ರಮಿಸುವುದನ್ನು ಹೇಳಿಕೊಟ್ಟರು ಮತ್ತು ಈ ಜೀವನವು ಎಷ್ಟೊಂದು ಸುಂದರ ಹಾಗೂ ಮಹತ್ತರವಾದುದೆಂದು ಕಂಡುಕೊಳ್ಳಲು ಸಹಕರಿಸಿದರು. ಅವರು ತಮ್ಮ ಬದುಕಿನ ಮುಖಾಂತರ, ಈ ಪ್ರಪಂಚದಲ್ಲಿ ಹೇಗೆ ಬದುಕುವುದು, ಎಲ್ಲಾ ಸೌಕರ್ಯಗಳಿದ್ದೂ ನಿರ್ಲಿಪ್ತತೆಯಿಂದ ಹೇಗೆ ಜೀವಿಸುವುದು ಎಂಬುದನ್ನು ಕಲಿಸಿಕೊಟ್ಟರು.

ಅಮರರವರು ಪ್ರೀತಿಯ ಭಂಡಾರವಾಗಿದ್ದರು ಮತ್ತು ಕ್ಷಮಾಗುಣದ ಮಹಾಸಾಗರವಾಗಿದ್ದರು. ಅವರು ಬೇರೆಯವರ ತಪ್ಪುಗಳನ್ನು ಎತ್ತಿ ತೋರಿಸುತ್ತಿರಲಿಲ್ಲ, ತಪ್ಪುಗಳನ್ನು ಲೆಕ್ಕ ಹಾಕುತ್ತಿರಲಿಲ್ಲ, ಯೋಗ್ಯತೆಯನ್ನು ನಿರ್ಣಯಿಸುತ್ತಿರಲಿಲ್ಲ. ಕೇವಲ ತಮ್ಮ ಅನಿರ್ಬಂಧಿತ ಪ್ರೀತಿಯ ಮಳೆಯನ್ನು ಸುರಿಸಿ, ಜನರು ಆಧ್ಯಾತ್ಮಿಕವಾಗಿ ಬೆಳೆಯುವುದಕ್ಕಾಗಿ ಕಾಯುತ್ತಿದ್ದರು. ಎಲ್ಲರಿಗೂ ಒಂದೇ ರೀತಿಯ ಅವಕಾಶ, ಒಂದೇ ಜ್ಞಾನ ಮತ್ತು ಒಂದೇ ರೀತಿಯ ಪ್ರೀತಿಯನ್ನು ನೀಡಿ ಅವರವರ ಸಾಮರ್ಥ್ಯವನ್ನು ಅರಿತುಕೊಳ್ಳುವಂತೆ ಮಾಡಿದರು. ಇಂದಿಗೂ ಕೂಡಾ ಅವರು ಉನ್ನತ ಮಟ್ಟಗಳಿಂದ ಈ ಕೆಲಸವನ್ನು ಮುಂದುವರಿಸುತ್ತಿದ್ದಾರೆ. ಅವರು ಮಾಡಿದುದೆಲ್ಲಕ್ಕೂ ಮತ್ತು ಮಾಡುತ್ತಿರುವುದೆಲ್ಲಕ್ಕೂ, ನಾವು ಪ್ರಕಾಶಿಸಬೇಕು ಎನ್ನುವುದೊಂದನ್ನೇ ಅವರು ನಮ್ಮಿಂದ ನಿರೀಕ್ಷಿಸುತ್ತಾರೆ. ಅವರ ನಿರೀಕ್ಷೆಯನ್ನು ಈಡೇರಿಸುವ ಮೂಲಕ ನಾವು ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸೋಣ. ■

## ಅಮರ

**ಶೋಭಾ ಕೆ. ರಾವ್; ಅನು: ಪಾಂಡುರಂಗ**

ನಾವು ಯಾರೂ ಅಮರರವರನ್ನು ನೋಡಿಲ್ಲ. ಆದರೆ ಗುರೂಜಿ ಅಮರರವರನ್ನು ನಮಗೆ ಪರಿಚಯ ಮಾಡಿಸಿದಂದಿನಿಂದ ಅವರು ನಮ್ಮ ಜೀವನದ ಮೇಲಷ್ಟೇ ಅಲ್ಲದೆ, ನಮ್ಮ ಸುತ್ತಮುತ್ತಲಿನವರ ಮೇಲೂ ಅಗಾಧವಾಗಿ ಪ್ರಭಾವ ಬೀರಿದ್ದಾರೆ; ನಮ್ಮೆಲ್ಲರ ಜೀವನವನ್ನು ಸುಂದರಗೊಳಿಸಿದ್ದಾರೆ. ಇದು ನಮ್ಮ ಜೀವನಕ್ಕೆ ಸಂತೋಷ ಮತ್ತು ಶಾಂತಿಯನ್ನು ತಂದಿದೆ. ಆದ್ದರಿಂದ ಅಮರರವರು ಯಾವಾಗಲೂ ನಮ್ಮ ಜೊತೆಯಲ್ಲೇ ಇದ್ದಾರೆ, ನಮ್ಮ ಜೊತೆಯಲ್ಲೇ ಇರುತ್ತಾರೆ.

ಅಮರರವರು ಜ್ಞಾನದ ಮತ್ತು ದಿವ್ಯ ಪ್ರೇಮದ ಸಾಗರವಾಗಿದ್ದರು. ಹಾಗಿದ್ದರೂ ಅವರು ಬಹಳ ಸರಳ ಮತ್ತು ವಿನಯವಂತ ವ್ಯಕ್ತಿಯಾಗಿದ್ದರು. ಅಮರರವರಿಲ್ಲದೆ ಸಾಮಾನ್ಯ ಸತ್ಯಗಳಾದ ದೇವರು ಒಂದು ಚೈತನ್ಯ, ಅವನು ನಮ್ಮೊಳಗೆ ಮತ್ತು ಎಲ್ಲೆಲ್ಲೂ ಅಗೋಚರ ಚೈತನ್ಯವಾಗಿ ಅಥವ ಬೆಳಕಾಗಿ ಇದ್ದಾನೆ ಎಂಬ ಮುಂತಾದ ವಿಷಯಗಳು ನಮಗೆ ತಿಳಿಯುತ್ತಿರಲಿಲ್ಲ ಮತ್ತು ಅರ್ಥವಾಗುತ್ತಿರಲಿಲ್ಲ. ಈ ಬೆಳಕನ್ನು ನೋಡಲಾಗುವುದಿಲ್ಲ ಆದರೆ ಅನುಭವಿಸಬಹುದು. ಹೀಗೆ, ದೇವರನ್ನು ಸಂಪರ್ಕಿಸುವುದು, ಅವನ ಸ್ನೇಹ ಸಂಪಾದಿಸುವುದು, ಅವನನ್ನು ಅನುಭವಿಸುವುದು ಮತ್ತು ಅವನೊಂದಿಗೆ ಶ್ರುತಿಗೊಂಡು ಜೀವನದ ಎಲ್ಲ ಅಡೆತಡೆಗಳನ್ನು ನಿವಾರಿಸಿಕೊಳ್ಳುವುದು ಸುಲಭವೆಂದು ನಮಗೆ ಅರಿವು ಮೂಡಿಸಿದ್ದಾರೆ. ಅಮರರವರ ಈ ಸರಳ ಬೋಧನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಎಲ್ಲ ರೀತಿಯಲ್ಲೂ ನಮ್ಮ ಜೀವನವನ್ನು ಸಮೃದ್ಧವಾಗಿಸಿಕೊಳ್ಳಬಹುದು.

ಅಮರರವರು ನಮಗೆ ಋಷಿಗಳನ್ನು ಮತ್ತು ಧ್ಯಾನವನ್ನು ಪರಿಚಯಿಸಿದ್ದಾರೆ. ಮನುಕುಲಕ್ಕೆ, ಧ್ಯಾನ ಒಂದು ಮಹಾನ್ ಕೊಡುಗೆ. ಧ್ಯಾನದ ನಿರಂತರ ಅಭ್ಯಾಸ ಒಬ್ಬ ವ್ಯಕ್ತಿಯ ಕರ್ಮಗಳನ್ನು ನಿವಾರಿಸಿ ಅವನನ್ನು ಶುದ್ಧಗೊಳಿಸುತ್ತದೆ. ಧ್ಯಾನದ ಅಭ್ಯಾಸಕ್ಕೆ ಮತ್ತು ಒಬ್ಬ ವ್ಯಕ್ತಿಯಲ್ಲಿ ಆಂತರಿಕ ಪರಿವರ್ತನೆ ತರುವಂಥ ಸಕಾರಾತ್ಮಕ ಚಿಂತನೆ ಮತ್ತು ಭಾವನೆಗಳಿಗೂ ಅಮರರವರು ಒತ್ತುಕೊಡುತ್ತಿದ್ದರು. ವ್ಯಕ್ತಿಗತ ಪರಿವರ್ತನೆಗೆ ಅವರು ಪ್ರಾಧಾನ್ಯತೆ ಕೊಡುತ್ತಿದ್ದರು. ಅಮರರವರು, ಒಬ್ಬ ಪರಿವರ್ತಿತ ವ್ಯಕ್ತಿ ಮುಖ್ಯವೆಂದು ಹೇಳುತ್ತಿದ್ದರು, ಏಕೆಂದರೆ ಆತನು ತನ್ನ ಸಕಾರಾತ್ಮಕತೆಗಳ ಮೂಲಕ ಸಮಾಜ ಮತ್ತು ಇಡೀ ಜಗತ್ತನ್ನು ದೇವರ ಪ್ರೀತಿ ಮತ್ತು ಚೈತನ್ಯಗಳಿಂದ ಶ್ರೀಮಂತಗೊಳಿಸುತ್ತಾನೆ.

ನಾವು ಯಾವಾಗಲೂ ಮಹಾನ್ ಮಾಸ್ಟರ್‌ರಿಂದ ಅಪರಿಮಿತ ಪ್ರೀತಿ ಮತ್ತು ಚೈತನ್ಯಗಳನ್ನು ಸ್ವೀಕರಿಸುತ್ತಲೇ ಇದ್ದೇವೆ. ಅವರ ಈ ಕೊಡುಗೆಗಳಿಗೆ ಸರಿಸಮಾನವಾದುದು ಯಾವುದೂ ಇಲ್ಲ. ಈಗಲೂ ಅಮರರವರು ನಮ್ಮನ್ನು ಮಾರ್ಗದರ್ಶಿಸುತ್ತಿದ್ದಾರೆ, ನಮ್ಮ ಬೆಳವಣಿಗೆಗೆ ಮತ್ತು ಪರಿವರ್ತನೆಗೆ ಬೇಕಾದ ಎಲ್ಲವನ್ನೂ ಕೊಡುತ್ತಿದ್ದಾರೆ. ನಾವು ಮತ್ತಷ್ಟು ಮುಕ್ತ ಮನಸ್ಸಿನಿಂದ ನಮ್ಮನ್ನು ಅಮರರವರಿಗೆ ಅರ್ಪಿಸಿಕೊಂಡು, ನಮ್ಮ ಹೃದಯಗಳಲ್ಲಿ ಅವರನ್ನು ಬರಮಾಡಿಕೊಳ್ಳೋಣ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಪರಕೀಯದ್ದಾದ, ಒಳ್ಳೆಯ ಅಥವ ಕೆಟ್ಟದ್ದನ್ನು ನಮ್ಮ ದೇಹದೊಳಗೆ ಸೇರಿಸಲು(ಇಂಪ್ಲಾಂಟ್) ಸಾಧ್ಯವೇ?**

ಉ: ಹೌದು, ಇದು ಸಾಧ್ಯ. ವಿಚಾರಗಳು ಮಾತ್ರವಲ್ಲದೆ ಕೆಲವೊಮ್ಮೆ ಉಪಕರಣಗಳನ್ನೂ ಒಳಸೇರಿಸ ಬಹುದು.

**ಪ್ರ: ಹೇಗೆ ಇವು ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಸೇರಿಕೊಳ್ಳುತ್ತವೆ?**

ಉ: ಸೂಕ್ಷ್ಮಮಟ್ಟದಲ್ಲಿ ದುಷ್ಟ ವ್ಯಕ್ತಿಗಳು ನಮ್ಮನ್ನು ಸಂಪರ್ಕಿಸುತ್ತಾರೆ, ಅದರಲ್ಲೂ ನಾವು ತಪ್ಪಾದವುಗಳನ್ನು ಆಯ್ಕೆ ಮಾಡಿಕೊಂಡಾಗ. ಅವರ ಆಮಿಷಗಳಿಗೆ ಬಲಿಯಾಗಿ, ನಾವು ನಮ್ಮ ಒಪ್ಪಿಗೆ ನೀಡುತ್ತೇವೆ. ಆದಕಾರಣ ನಮ್ಮ ಸಮ್ಮತಿಯೊಂದಿಗೆ ಇವುಗಳನ್ನಲ್ಲದೆ ಉಪಕರಣ ಗಳನ್ನೂ ನಮ್ಮೊಳಗೆ ಸೇರಿಸುತ್ತಾರೆ.

**ಪ್ರ: ನಾವು ಸೂಕ್ಷ್ಮಮಟ್ಟದಲ್ಲಿ ತಪ್ಪು ಆಯ್ಕೆಗಳನ್ನು ಮಾಡಿದ್ದೇವೆ ಎಂದು ನಮಗೆ ಹೇಗೆ ತಿಳಿಯುತ್ತದೆ?**

ಉ: ಸಾಮಾನ್ಯವಾಗಿ ನಾವು ಮುಗ್ಧರು ಎಂದು ಅಂದುಕೊಳ್ಳುತ್ತೇವೆ, ಆದರೆ ನಮಗೆ ಪ್ರತಿಯೊಂದರ ಅರಿವಿರುತ್ತದೆ. ಈ ಮಟ್ಟದಲ್ಲಿ ಕೂಡಾ ನಮಗೆ ಅದರ ಅರಿವಿದ್ದು, ನಮಗೆ ಗೊತ್ತಿಲ್ಲವೇನೊ ಎಂಬಂತೆ ನಟಿಸುತ್ತೇವೆ. ಇದು ವಾಸ್ತವ ಸಂಗತಿ. ಸ್ವಲ್ಪ ಜಾಗರೂಕರಾಗಿದ್ದರೆ, ಸ್ವಲ್ಪ ಆತ್ಮಾವಲೋಕನ ಮಾಡಿಕೊಂಡರೆ ನಾವು ಯಾವ ಬದಿಯಲ್ಲಿದ್ದೇವೆ ಎಂಬ ಸತ್ಯ ಬಹಿರಂಗಗೊಳ್ಳುತ್ತದೆ.

**ಪ್ರ: ಇಂಪ್ಲಾಂಟ್‌ಗಳಿದ್ದರೆ ಅವುಗಳನ್ನು ತೆಗೆದು ಹಾಕುವುದು ಹೇಗೆ?**

ಉ: ಬದಿಯನ್ನು ಬದಲಾಯಿಸಿ, ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳಿ; ದೇವರು, ಬೆಳಕು ಮತ್ತು ಋಷಿಗಳನ್ನು ಆಯ್ಕೆ ಮಾಡಿಕೊಳ್ಳಿ. ಅಷ್ಟು ಸಾಕು. ನಾವು ಪ್ರಾಮಾಣಿಕರಾಗಿರಬೇಕು. ಆದರೆ ನೀವು ನಿಜವಾಗಿಯೂ ಆಯ್ಕೆ ಮಾಡಿಕೊಳ್ಳದಿದ್ದರೆ, ನಿಮಗೆ ಸಹಾಯ ಸಿಗುವುದಿಲ್ಲ. ಋಷಿಗಳು ಮಧ್ಯೆ ಪ್ರವೇಶಿಸುವುದಿಲ್ಲ.

**ಪ್ರ: ಧ್ಯಾನಕ್ಕೆ ಮತ್ತು ಲೈಟ್ ಚಾನಲಿಂಗ್‌ಗೆ ಇರುವ ವ್ಯತ್ಯಾಸವೇನು?**

ಉ: ಧ್ಯಾನದಲ್ಲಿ ನಾವು ಬೆಳಕನ್ನು ಸ್ವೀಕರಿಸುತ್ತೇವೆ ಮತ್ತು ಬೆಳಕನ್ನು ಅನುಭವಿಸುತ್ತೇವೆ. ಲೈಟ್ ಚಾನಲಿಂಗ್‌ನಲ್ಲಿ ನಾವು ಬೆಳಕನ್ನು ಸ್ವೀಕರಿಸುತ್ತೇವೆ, ಬೆಳಕನ್ನು ಅನುಭವಿಸುತ್ತೇವೆ ಮತ್ತು ಬೆಳಕನ್ನು ಸುತ್ತಲೂ ಹರಡುತ್ತೇವೆ.

**ಪ್ರ: ಧ್ಯಾನಿಯಲ್ಲದವರಿಗೆ ಈ ವಿಷಯಗಳನ್ನು ಹೇಗೆ ನಾವು ಸರಳವಾಗಿ ವಿವರಿಸಬಹುದು?**

ಉ: ಇದಕ್ಕಿಂತ ಸರಳ ಮಾಡಲು ಸಾಧ್ಯವಿಲ್ಲ. ಬೆಳಕನ್ನು ಅನುಭವಿಸಿದಾಗ ಅದು ಧ್ಯಾನ. ಅನುಭವಿಸುತ್ತ ಸುತ್ತಲೂ ಹರಡಿದಾಗ ಅದು ಲೈಟ್ ಚಾನಲಿಂಗ್. ಇದನ್ನು ಧ್ಯಾನಿಗಳಿಗೆ, ಧ್ಯಾನಿಯಲ್ಲದವರಿಗೆ ಮತ್ತು ಯಾರಿಗೆ ಬೇಕಾದರೂ ನೀವು ತಿಳಿಸಬಹುದು.

**ಪ್ರ: ಲೈಟ್ ಚಾನಲಿಂಗ್‌ಗೆ ಒಬ್ಬ ದೇವನಿದ್ದಾನೆಯೇ?**

ಉ: ಲೈಟ್ ಚಾನಲಿಂಗ್ ಕಾರ್ಯಕ್ಕಾಗಿ ಪ್ರತ್ಯೇಕವಾದ ದೇವರಿಲ್ಲ. ಆದರೆ ಋಷಿಯೊಬ್ಬರಿದ್ದಾರೆ. ಅವರೇ ಮಾಸ್ಟರ್–ವಿ. ಅವರು ಲೈಟ್ ಚಾನಲಿಂಗ್ ಚಟುವಟಿಕೆಯ ಮುಖ್ಯಸ್ಥರಾಗಿದ್ದಾರೆ.

**ಪ್ರ: ಆಧ್ಯಾತ್ಮಿಕವಾಗಿ ಮುಂದುವರಿಯಲು, ಬೆಳಕಿನ ಅನುಭವವೊಂದೇ ಸಾಕೇ?**

ಉ: ಹೌದು. ನಾವು ಒಂದು ದಿನದಲ್ಲಿ ಕನಿಷ್ಠ 3 ತಾಸುಗಳವರೆಗೆ ಗಾಢವಾಗಿ ಬೆಳಕನ್ನು ಅನುಭವಿಸಬೇಕು; ಸಾಧ್ಯವಾದಷ್ಟು ಎಲ್ಲಾ ಸಮಯದಲ್ಲೂ ಈ ಬೆಳಕು ನಮ್ಮೊಳಗೆ ಇರುವಂತೆ ನೋಡಿಕೊಳ್ಳಬೇಕು. ಈ ಒಂದು ಅಭ್ಯಾಸದಿಂದಲೇ, ನಾವು ಸಮಾಧಿಯನ್ನು ಅನುಭವಿಸಬಹುದು ಮತ್ತು ಉನ್ನತ ಜ್ಞಾನೋದಯದ ಮಟ್ಟವನ್ನು ತಲುಪಬಹುದು ಹಾಗೂ ಮುಕ್ತಿಯನ್ನು ಪಡೆಯಬಹುದು.

**ಪ್ರ: ಎಷ್ಟು ದಿನಗಳವರೆಗೆ ಲೈಟ್ ಚಾನಲಿಂಗ್ ಮಾಡುವುದನ್ನು ಮುಂದುವರಿಸಬೇಕು?**

ಉ: ಬೆಳಕು ಎಲ್ಲಿಯವರೆಗೆ ಇರುತ್ತದೋ, ಅಲ್ಲಿಯವರೆಗೆ ನಾವು ಲೈಟ್ ಚಾನಲಿಂಗ್ ಮಾಡಬೇಕು.

**ಪ್ರ: ಬೆಳಕೇ ಹೀಲಿಂಗ್ ಮಾಡುವುದಾದರೆ, ನಾವು ಏಕೆ ಪ್ರತ್ಯೇಕವಾಗಿ ಹೀಲಿಂಗ್ ಚೈತನ್ಯಗಳನ್ನು ಕಳುಹಿಸಬೇಕು?**

ಉ: ನಾವು ನಾನಾ ವಿಧದ ಹೀಲಿಂಗ್ ಚೈತನ್ಯಗಳನ್ನು ಸಂಗ್ರಹಿಸಿ ಒಂದುಕಡೆ ಶೇಖರಿಸಿಟ್ಟಿದ್ದೇವೆ. ನಾವು ಹೀಲಿಂಗ್ ಚೈತನ್ಯಗಳ ಅಧಿದೇವತೆಯಾದ ಸಂತೋಷಿ ದೇವಿಯೊಡನೆ ಸಂಪರ್ಕ ಕಲ್ಪಿಸಿದಾಗ, ಆಕೆಯು ಆಯಾ ವ್ಯಕ್ತಿಗಳಿಗನುಸಾರವಾಗಿ ಸೂಕ್ತವಾದ ಹೀಲಿಂಗ್ ಚೈತನ್ಯಗಳನ್ನು ಕಳುಹಿಸುತ್ತಾಳೆ. ಆದಕಾರಣ ಹೀಲಿಂಗ್ ಚೈತನ್ಯಗಳನ್ನು ಪ್ರತ್ಯೇಕವಾಗಿ ಕಳುಹಿಸುವುದು ಅವಶ್ಯಕ.


**ಪ್ರ: ಲೌಕಿಕ ಗುರಿಗಳನ್ನಿಟ್ಟುಕೊಂಡಿದ್ದರೂ, ಯುವ ಜನತೆ ಅಧ್ಯಾತ್ಮದೆಡೆಗೆ ತಿರುಗುತ್ತಿದ್ದಾರೆ. ಏಕೆ?**

ಉ: ಏಪ್ರಿಲ್ 1974 ರಿಂದ ಜನರಲ್ಲಿ ಜಾಗೃತಿ ಉಂಟಾಗಿದೆ. ಅಲ್ಲಿನಿಂದ ನಾವು ಹೊಸ ಯುಗದ ಕಡೆಗೆ ಪ್ರಯಾಣಿಸುತ್ತಿದ್ದೇವೆ. ಹೊಸ ಚೈತನ್ಯಗಳು ಬಿಡುಗಡೆಯಾಗುತ್ತಿವೆ, ಅವು ಮೆದುಳಿನಲ್ಲಿ ಹೊಸ ಜೀವಕೋಶಗಳು ತೆರೆಯುವಂತೆ ಮಾಡುತ್ತವೆ ಮತ್ತು ವ್ಯಕ್ತಿಗಳನ್ನು ಜಾಗೃತಗೊಳಿಸುತ್ತವೆ. ಬಿಡುವಿಲ್ಲದ ಈ ಜೀವನದಲ್ಲಿ ಮತ್ತು ಆಧುನಿಕ ಜೀವನ ಶೈಲಿಯ ಒತ್ತಡದಲ್ಲಿಯೂ, ಯುವ ಜನತೆ ಸಹಜವಾಗಿಯೇ ಅಧ್ಯಾತ್ಮದೆಡೆಗೆ ತಿರುಗುತ್ತಿದ್ದಾರೆ, ಏಕೆಂದರೆ ಅವರು ಮುಂದುವರಿದ ಆತ್ಮಗಳು. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयुगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 75/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಇ-ಮೇಲ್/ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್ ; ಅನು: ಸ್ವರ್ಣಲತಾ

ನಿದ್ದೆಯಲ್ಲಿ ನನಗೆ, ಸೂಕ್ಷ್ಮಮಟ್ಟದ ಆಧ್ಯಾತ್ಮಿಕ ತರಗತಿಗಳಲ್ಲಿ ನಾನು ತರಬೇತಿ ಪಡೆಯುತ್ತಿರುವಂತೆ ಅನುಭವವಾಗುತ್ತದೆ. ಅನೇಕ ಸಲ ಬೆಳಗಿನ ಜಾವ 4 ರಿಂದ 5 ಗಂಟೆಯಲ್ಲಿ ನಾನು ಎಚ್ಚರಗೊಂಡಾಗ, ನಾನೆಲ್ಲೋ ಹೋಗಿ ಬಂದ ಅನುಭವ ಆಗಿದೆ. ಅದರ ಬಗ್ಗೆ ನೆನಪಿಸಿಕೊಳ್ಳಲು ಪ್ರಯತ್ನಿಸಿದರೆ, ನಿದ್ದೆಯ ಆ ಸಮಯ ಸಂಪೂರ್ಣವಾಗಿ ಶೂನ್ಯವಾಗುತ್ತದೆ. ಗುರೂಜಿಯವರು ನನ್ನನ್ನು ಆಧ್ಯಾತ್ಮಿಕವಾಗಿ ಬೆಳೆಸುತ್ತಿದ್ದಾರೆ ಎಂದು ನನಗನಿಸುತ್ತದೆ. ಅವರು ನನಗೆ ಬಹಳ ಹತ್ತಿರವಾಗುತ್ತಿರುವಂತೆ ಯಾವಾಗಲೂ ಅನಿಸುತ್ತಿರುತ್ತದೆ.

ಟೆಲಿಪತಿ ಮತ್ತು ಅಂತರ್ ಗ್ರಹಣ ಶಕ್ತಿಯಂತಹ ಸಾಮರ್ಥ್ಯಗಳು ನಿಧಾನವಾಗಿ ತೆರೆದುಕೊಳ್ಳುತ್ತಿವೆ. ಕಚೇರಿಯಲ್ಲಿ ಕೆಲಸದಲ್ಲಿ ತೊಡಗಿದ್ದಾಗ ನಾನು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೇನೋ ಇಲ್ಲವೋ ಎಂದು ನನಗೆ ತಿಳಿಯುತ್ತದೆ. ನಾನು ಏನಾದರೂ ತಪ್ಪುದಾರಿಯಲ್ಲಿದ್ದರೆ ನನ್ನೊಳಗೆ ಒಂದು ರೀತಿಯ ಚುಚ್ಚುವಿಕೆಯುಂಟಾಗುತ್ತದೆ. ಅದನ್ನು ಅರಿತುಕೊಂಡರೆ ಏನೂ ಸಮಸ್ಯೆಗಳುಂಟಾಗುವುದಿಲ್ಲ. ಇಲ್ಲದಿದ್ದರೆ ಸಮಸ್ಯೆಗಳುಂಟಾಗಿ ನನ್ನ ತಪ್ಪಿನ ಅರಿವಾಗುತ್ತದೆ.

– ಪುಷ್ಕರ್ ಪಟ್ಕಿ

ಒಂದು ಮಧ್ಯಾಹ್ನ ನಾನು ವಿಶ್ರಾಂತಿ ಪಡೆಯುತ್ತಿದ್ದಾಗ, ಪ್ರೀತಿಯಿಂದ ತುಂಬಿದ್ದ ಚೈತನ್ಯದ ಮೋಡವು ಕೆಳಗಿಳಿದು ನನ್ನನ್ನು ಆವರಿಸಿತು. ನಾನು ಆ ಮೋಡದೊಳಗೆ ಬಹಳ ಕಾಲವಿದ್ದೆ; ನನಗಿದ್ದ ಭಯ ಹಾಗೂ ಅಭದ್ರತೆ ದೂರವಾಯಿತು. ನಂತರ, ಆ ಮೋಡದಲ್ಲಿ ರಂಧ್ರವಾಗಿ ಆ ಪ್ರೀತಿಯ ಚೈತನ್ಯ ವಾತಾವರಣಕ್ಕೆ ಹರಿದು ಇಡೀ ವಿಶ್ವದಲ್ಲೆಲ್ಲಾ ಅದೇ ರೀತಿಯ ಪ್ರೀತಿ ಮತ್ತು ಭದ್ರತೆ ಲಭ್ಯವಿರುವುದನ್ನು ಸೂಚಿಸಿತು. ಈ ಅನುಭವದ ನಂತರ ನಾನು ಸೃಷ್ಟಿಯೊಡನೆ ಹೆಚ್ಚು ನಿರಾತಂಕವಾಗಿ, ಸುಲಭವಾಗಿ ಹಾಗೂ ಪ್ರೀತಿಯಿಂದ ಸಂಪರ್ಕಿಸಲು ಸಾಧ್ಯವಾಗಿದೆ.

– ನಿರ್ಮಲಾ ಬಾಲಾ

ಸಾಮಾನ್ಯವಾಗಿ ರಾತ್ರಿಯ ವೇಳೆ ಅಥವಾ ನಾನೇನಾದರೂ ಮಹತ್ವದ ಕೆಲಸ ಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ನನ್ನ ಸುತ್ತಲೂ ಚೈತನ್ಯದ ಮಟ್ಟಗಳು ಮೇಲೇರುವ ಅನುಭವ ಅನೇಕ ಸಲ ಆಗುತ್ತದೆ. ಯಾವಾಗಲೂ ನನ್ನೊಡನೆ ಒಂದು ದಿವ್ಯಶಕ್ತಿ ಇರುವ ಅರಿವನ್ನು ನನಗೆ ನೀಡುತ್ತದೆ. ಆಯಾಮಗಳು ಬದಲಾಗುತ್ತಿವೆ, ಪರಿವರ್ತನೆಯಾಗಿದೆ; ಅದು ಒಳಗಿನಿಂದ ಪ್ರಾರಂಭವಾಗಿ ಸುತ್ತಲಿನ ವಾತಾವರಣಕ್ಕೂ ವಿಸ್ತರಿಸುತ್ತದೆ.

– ಗೀತಾ ಜೋಶಿ

ನನ್ನಲ್ಲಿ ಹಗುರತೆಯ ಅನುಭವವಾಗುತ್ತಿದೆ. ರಕ್ಷಣಾ ಕವಚ ನನ್ನನ್ನು ನಕಾರಾತ್ಮಕ ಕಂಪನಗಳಿಂದ ರಕ್ಷಿಸುತ್ತಿದೆ. ನನ್ನ ಎಲ್ಲಾ ಯೋಜನೆಗಳೂ ನನ್ನಿಷ್ಟದಂತೆಯೇ ಸಾಕಾರಗೊಳ್ಳುತ್ತಿವೆ. ಋಷಿಗಳು, ಗುರೂಜಿ ಹಾಗೂ ಎಲ್ಲಾ ಮಾರ್ಗದರ್ಶಕರಿಗೂ ನನ್ನ ಅನಂತಾನಂತ ವಂದನೆಗಳು.

– ನಂದಿತಾ ಪಟೇಲ್

ನನ್ನಲ್ಲಿ ಕೇವಲ ಸಕಾರಾತ್ಮಕ ಯೋಚನೆಗಳಿರುವುದರಿಂದ ನಾನು ಯಾವಾಗಲೂ ಸಂತೋಷದಿಂದ ಮತ್ತು ತೃಪ್ತಿಯಿಂದ ಇದ್ದೇನೆ. ಬೇರೆಯವರಿಗೆ ಸಹಾಯ ಮಾಡಬೇಕೆಂಬ ಆಸೆ ಹೆಚ್ಚಾಗಿದೆ. ಸಂತೃಪ್ತಿ ಹಾಗೂ ಪ್ರಶಾಂತತೆ ಹೆಚ್ಚಾಗಿದೆ; ನನ್ನ ಕೋಪ ಈಗ ಹತೋಟಿಯಲ್ಲಿದೆ. ಸಾವಿನ ಭಯ ಹಾಗೂ ಇತರ ಭಯಗಳೆಲ್ಲವೂ ಮರೆಯಾಗಿವೆ.

– ವಿ. ಪಿ. ಮಾಥುರ್

ಕೆಲವೇ ತಿಂಗಳಲ್ಲಿ ನನ್ನ ಜೀವನ ಸಕಾರಾತ್ಮಕವಾಗಿ ಬದಲಾಗಿರುವುದನ್ನು ನಾನು ಗುರುತಿಸಬಲ್ಲೆ. ಈಗ ನಾನು ಬೆಳಕನ್ನು ಎಲ್ಲಾ ಮಟ್ಟಗಳಲ್ಲಿ, ಎಲ್ಲಾ ಸಮಯದಲ್ಲಿ ಅನುಭವಿಸಬಲ್ಲೆ. ನಾನು ಧ್ಯಾನ ಹಾಗೂ ಇತರ ಸಮಯದಲ್ಲೂ ಪ್ರಶಾಂತತೆಯನ್ನು ಅನುಭವಿಸುತ್ತೇನೆ. ಈಗ ಬೇರೆಯವರ ಜೊತೆಯಲ್ಲಿ ಕೂಡಾ ಸಾಮರಸ್ಯದಿಂದಿದ್ದು, ಅವರ ತೀರ್ಮಾನಗಳನ್ನು, ಇತಿಮಿತಿಗಳನ್ನು ಮತ್ತು ಅವರ ನಿಲುವನ್ನು ಗೌರವಿಸುತ್ತೇನೆ. ನನಗೆ ಯಾರ ಬಗ್ಗೆ ದ್ವೇಷವಿತ್ತೋ ಅವರ ಬಗ್ಗೆ ಈಗ ನನ್ನಲ್ಲಿ ಕೋಪವೇ ಇಲ್ಲ. ಇದು ನನ್ನಲ್ಲಾಗಿರುವ ಅತ್ಯಂತ ಮಹತ್ತರ ಬದಲಾವಣೆ.

– ಅಭಯ್ ಜೋಶಿ

ನಾನು ಈಗ ಒಬ್ಬ ಉತ್ತಮ ವ್ಯಕ್ತಿಯಾಗಿದ್ದೇನೆ, ಬೇರೆಯವರ ಬಗೆಗಿನ ನನ್ನ ದೃಷ್ಟಿಕೋನ ಬದಲಾಗುತ್ತಿದೆ. ಈಗ ನನ್ನಲ್ಲಿ ಹೆಚ್ಚು ಕರುಣೆಯಿದೆ, ಸಹಾನುಭೂತಿ ಹೆಚ್ಚಾಗಿದೆ. ಸರ್ವಸ್ವವೂ 'ದೇವರೇ' ಹಾಗೂ ಮೌನವಾಗಿದ್ದುಕೊಂಡು ಬಂದದ್ದನ್ನೆಲ್ಲ ಸ್ವೀಕರಿಸಿದರೆ ಅಷ್ಟೇ ಸಾಕು ಎಂಬ ಅರಿವು ನನ್ನಲ್ಲುಂಟಾಗಿದೆ.

– ಮೈತ್ರೇಯಿ ಶಶಾಂಕ್

ಈ ವರ್ಷದ ಮೊದಲಿನಿಂದಲೂ ನನ್ನ ಜೀವನವು ದೊಡ್ಡ ಬಿರುಗಾಳಿ ಬೀಸಿದೆಯೇನೋ ಎಂಬಂತೆ ಅತ್ಯಂತ ಕಷ್ಟಕರ ಮತ್ತು ಸಹಿಸಲಸಾಧ್ಯವಾಗಿತ್ತು. ಆದರೆ ಪ್ರತಿನಿತ್ಯದ ಧ್ಯಾನ ಹಾಗೂ ಮೊದಲನೆ ಶಂಬಲ ನಿಯಮದ ಅಭ್ಯಾಸದಿಂದಾಗಿ ಆ ಎಲ್ಲವನ್ನೂ ಶಾಂತವಾಗಿ ದಾಟಲು ಸಾಧ್ಯವಾಯಿತು. ಧ್ಯಾನಾಭ್ಯಾಸದ ಮತ್ತು ಶಂಬಲ ನಿಯಮಗಳ ಬೆಲೆಯನ್ನು ನಾನು ಅರಿತೆ. ಆದರೆ ಋಷಿಗಳು ಹಾಗೂ ಗುರೂಜಿಯವರಿಲ್ಲದಿದ್ದರೆ ನಾನು ಚೂರುಚೂರಾಗಿ ಭಗ್ನಗೊಳ್ಳುತ್ತಿದ್ದೆ. ಅವರು ನನ್ನನ್ನು ಸಂರಕ್ಷಿಸಿದರು. ಈಗ ನಾನು ಅವರ ಒಂದು ಭಾಗವೇ ಆಗಿಹೋಗಿದ್ದೇನೆ ಎಂದು ನನಗನ್ನಿಸುತ್ತದೆ. ಅವರಿಗೆ ಕೃತಜ್ಞತೆ ತಿಳಿಸಲು ನನ್ನಲ್ಲಿ ಪದಗಳೇ ಇಲ್ಲ.

– ದೀಪಕ್ ದಿವಾಕರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ|| ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ